ಜನೇವರಿ ೨೦೨೬

# ಸೇವಾವಾಣಿ

ಸಮಾಜದ ಹಿತಕ್ಕೆ ಸಮರ್ಪಿತ ಸೇವೆ.



## ಆರ್ಬಿಟ್ ಸಮಾಜ ಸೇವಾ ಸಂಸ್ಥೆ, ಹುಮನಾಬಾದ ಮತ್ತು ಸೇವಾ ಸಂಗಮ ಸಂಸ್ಥೆ, ಕಲಬುರಗಿ



ಡಾ॥ ರಾಬರ್ಟ್ ಮೈಕಲ್ ಮಿರಾಂದ
ಧರ್ಮಾಧ್ಯಕ್ಷರು, ಹಾಗೂ ಅಧ್ಯಕ್ಷರು
ಆರ್ಬಿಟ್ ಮತ್ತು ಸೇವಾ ಸಂಗಮ ಸಂಸ್ಥೆ



ಫಾದರ್॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ

# "ಆರ್ಬಿಟ್ ಸಮಾಜ ಸೇವಾ ಸಂಸ್ಥೆಯಲ್ಲಿ ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಸರ್ವಧರ್ಮ ಸೌಹಾರ್ದಕೂಟ"

**ಹುಮನಾಬಾದ** ಪಟ್ಟಣದ ಹೊರವಲಯದ ಆರ್ಬಿಟ್ ಸಮಾಜ ಸೇವಾ ಸಂಸ್ಥೆಯಲ್ಲಿ ಕ್ರಿಸ್ಮಸ್ ಪಯುಕ್ತ ಶನಿವಾರ ಆಯೋಜಿಸಿದ್ದ ಸರ್ವಧರ್ಮ ಸೌಹಾರ್ದಕೂಟ ಆಯೋಜಿಸಲಾಯಿತು. ದಿವ್ಯ ಸಾನಿಧ್ಯ ವಹಿಸಿ ಮಾತನಾಡಿದ ಪೂಜ್ಯರು, ಆರ್ಬಿಟ್ ಸಂಸ್ಥೆ ಹಲವಾರು ವರ್ಷಗಳಿಂದ, ಜಾತಿ, ಧರ್ಮ, ಕುಲ ಭೇದವಿಲ್ಲದೆ ಜಾತ್ಯತೀತ ಮನೋಭಾವನೆಯಿಂದ ಸರ್ವಜನಾಂಗ ಸುಖಿನೋ ಭವಂತು ಎನ್ನುವ ತತ್ವವನ್ನು ಅಳವಡಿಸಿಕೊಂಡು ತನ್ನ ಸೇವೆಯನ್ನು ಸಮಾಜದ ಅಂಚಿನಲ್ಲಿರುವ ಜನರಿಗೆ ತಲುಪಿಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಸರ್ವ ಧರ್ಮಗಳಲ್ಲಿಯೇ ಮಾನವೀಯತೆಯ ಧರ್ಮ ಶ್ರೇಷ್ಠವಾದದ್ದು ಎಂದು ಹುಡಗಿ ವಿರಕ್ತಮಠದ ಶ್ರೀ ಚನ್ನಮಲ್ಲ ಸ್ವಾಮಿ ನುಡಿದರು. ಜಿಲ್ಲಾ ವಿಕಲಚೇತನರ ಅಧಿಕಾರಿ ಶ್ರೀ ಸುಭಾಷ ರತನ್ ಮಾತನಾಡಿ, ಅರ್ಬಿಟ್ ಸಂಸ್ಥೆಯು ಜಿಲ್ಲೆಯಾದ್ಯಂತ ತನ್ನ ಸಮಾಜ ಸೇವೆಗೆ ಹೆಸರುವಾಸಿ -ಯಾಗಿದೆ. ಇಂದು ಜನರು ಸಂಸ್ಥೆಯ ಹೆಸರು ಗುರುತಿಸುವ ಮಟ್ಟಿಗೆ ಸಮುದಾಯದ ತಳಮಟ್ಟದಲ್ಲಿ ತನ್ನ ಸಮಾಜ ಸೇವೆ ಮಾಡುತ್ತಿದೆ ಎಂದರು. ಅಧ್ಯಕ್ಷತೆ ವಹಿಸಿದ ಜಲಸಂಗಿ ಧರ್ಮ ಕೇಂದ್ರದ ಫಾದರ್॥ ವಿನ್ಸೆಂಟ್ ಥೋರಸ್ ಮಾತನಾಡಿ ಗಡಿಯಲ್ಲಿ ದೇಶ ಕಾಯುವ ಸೈನಿಕನ ಕಾಯಕ ಎಷ್ಟು ಶ್ರೇಷ್ಠವಾದದ್ದು ಅಷ್ಟೇ ಜವಾಬ್ದಾರಿ ಸಮಾಜ ಸೇವಾ ಕಾರ್ಯಕರ್ತರಿಗೆ ಇರುತ್ತದೆ. ಈ ನಿಟ್ಟಿನಲ್ಲಿ ನೊಂದವರ ಧ್ವನಿಯಾಗಿ ಸೇವಕರು ಕಾರ್ಯ ನಿರ್ವಹಿಸುತ್ತಿರುವುದು ಮಾದರಿ ಸಂಗತಿ ಎಂದರು. ಆರ್ಬಿಟ್ ಸಂಸ್ಥೆಯ ನಿರ್ದೇಶಕರು ಫಾದರ್ ವಿಕ್ಟರ್ ವಾಸ್ ಪ್ರಾಸ್ತಾವಿಕ ಮಾತನಾಡಿದರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಶ್ರೀಮತಿ ಮಲ್ಲಮ್ಮ, ಬೆಥನಿ ಕಾನ್ವೆಂಟ್‌ನ, ಮುಖ್ಯಸ್ಥೆ ಸಿಸ್ಟರ್ ಲೀರಾ, ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರು ಫಾದರ್ ಅಲ್ಬರ್ಟ್, ಕಾರ್ಯಕ್ರಮದ ವ್ಯವಸ್ಥಾಪಕರು ಸಿಸ್ಟರ್॥ ಪ್ರೀತಿ, ಸಿಸ್ಟರ್॥ ಕ್ರಿಸ್ಟಿನ, ಸಿಸ್ಟರ್॥ ಎಡ್ನಾ ಇತರರಿದ್ದರು. ಆರಂಭದಲ್ಲಿ ಸರ್ವಧರ್ಮದ ಗುರುಗಳು ಯೇಸುವಿನ ಜನನದ ದ್ಯುತಕವಾಗಿನಿರ್ಮಿಸಲಾದ ಅನಾವರಣ ಗೊಳಿಸಲಾಯಿತು. ಗೋದಲಿಯನ್ನು ಮಕ್ಕಳಿಂದ ಸರ್ವಧರ್ಮ ಗ್ರಂಥ ಪಠಿಸಲಾಯಿತು. ಬೆಥನಿ ಶಾಲೆಯ ಮಕ್ಕಳು ಪ್ರಾರ್ಥಿಸಿದರು. ಪ್ರವೀಣ್ ಸ್ವಾಗತಿಸಿದರು. ಸವಿತಾ ನಿರೂಪಣೆ ಮಾಡಿದರು. ಯೋಹಾನ್ ವಂದಿಸಿದರು.







# "ನವಜೀವನ (ಎ.ಪಿ.ಐಫ್) ಕಾರ್ಯಕ್ರಮ"

## "ಆರ್ಬಿಟ್ ಮತ್ತು ಸೇವಾ ಸಂಗಮ ಸಿಬ್ಬಂದಿಗಳಿಂದ ಕ್ರಿಸ್ಮಸ್ ಹಬ್ಬದ ಸಂಭ್ರಮೋತ್ಸವ"



23 ಡಿಸೆಂಬರ್ 2025ರಂದು ಹುಮನಾಬಾದ್ ನಗರದ ಹೊರವಲಯದಲ್ಲಿ ಆರ್ಬಿಟ್ ಸಂಸ್ಥೆಯಲ್ಲಿ ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಸಿಬ್ಬಂದಿ ವರ್ಗದವರಿಂದ ಕಾರ್ಯಕ್ರಮವನ್ನು ಸಂಸ್ಥೆಯ ನಿರ್ದೇಶಕರಾದ ಅತಿ ವಂದನೀಯ ಫಾದರ್ ವಿಕ್ಟರ್ ವಾಸ್ ರವರ ನೇತೃತ್ವದಲ್ಲಿ ಹಮ್ಮಿಕೊಂಡಿದರು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆರೋಗ್ಯ ಮಾತೆ ದೇವಾಲಯ ಜಲಸಂಗಿ ಕೇಂದ್ರದ ನಿರ್ದೇಶಕರಾದ ವಂದನೀಯ ಫಾದರ್ ವಿನ್ಸೆಂಟ್ ಫೋರಸ್ ರವರು ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಸೌಹಾರ್ದತೆ, ಪ್ರೀತಿ ಹಾಗೂ ಮಾನವೀಯ ಮೌಲ್ಯಗಳನ್ನು ಜನರಲ್ಲಿ ಬೆಳೆಸುವ ಈ ಕಾರ್ಯಕ್ರಮದ ಮೂಲಕ ಸಮಾಜದಲ್ಲಿ ಪರಸ್ಪರ ಗೌರವ, ಶಾಂತಿ ಮತ್ತು ಸಹಬಾಳ್ವೆಯ ಮಹತ್ವವನ್ನು ಸಾರಲಾಯಿತು. ಕಾರ್ಯಕ್ರಮದ ಸಮಯದಲ್ಲಿ ಜನರಿಗೆ ಕ್ರಿಸ್ಮಸ್ ಹಬ್ಬದ ಮಹತ್ವ, ಯೇಸು ಕ್ರಿಸ್ತನ ತ್ಯಾಗ, ಪ್ರೀತಿ ಹಾಗೂ ಕ್ಷಮೆಯ ಸಂದೇಶಗಳ ಕುರಿತು ಅರಿವು ಮೂಡಿಸಲಾಯಿತು. ವಿವಿಧ ವರ್ಗದ ಜನರಿಗೆ ದೂರವಾಣಿ ಮುಖಾಂತರ ಸಂಪರ್ಕಿಸಿ, ಹಬ್ಬದ ಶುಭಾಶಯಗಳೊಂದಿಗೆ ಸೌಹಾರ್ದತೆ ಮತ್ತು ಒಗ್ಗಟ್ಟಿನ ಸಂದೇಶವನ್ನು ನೀಡಲಾಯಿತು. ಈ ಕಾರ್ಯಕ್ರಮದ ಮೂಲಕ ವಿಶೇಷವಾಗಿ ಮಾನಸಿಕ ಅಸ್ವಸ್ಥರು, ಅವರ ಪೋಷಕರು ಹಾಗೂ ಸಮಾಜದ ಹಿಂದುಳಿದ ವರ್ಗದ ಜನರಿಗೆ ಧೈರ್ಯ, ಆತ್ಮಸ್ಥೈರ್ಯ ಮತ್ತು ಸಕಾರಾತ್ಮಕ ಚಿಂತನೆಗಳನ್ನು ಹಂಚಿಕೊಳ್ಳಲಾಯಿತು. ಹಬ್ಬದ ಸಂದರ್ಭದಲ್ಲಿ ಸಮಾಲೋಚನೆ, ಪ್ರೋತ್ಸಾಹ ಹಾಗೂ ಭರವಸೆಯ ಮಾತುಗಳನ್ನು ನೀಡಲಾಯಿತು. ಕಾರ್ಯಕ್ರಮದಲ್ಲಿ ಪಾಲ್ಗೊಂಡ ಪ್ರತಿಯೊಬ್ಬರೂ ಸಂತಸ ವ್ಯಕ್ತಪಡಿಸಿ, ಇಂತಹ ಕಾರ್ಯಕ್ರಮಗಳು ಸಮಾಜದಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಬೆಳೆಸಲು ಸಹಕಾರಿಯಾಗಿವೆ ಎಂದು ಅಭಿಪ್ರಾಯಪಟ್ಟರು. ಒಟ್ಟಾರೆ, ಕ್ರಿಸ್ಮಸ್ ಹಬ್ಬದ ಪ್ರಯುಕ್ತ ನಡೆಸಿದ ಈ ಕ್ರಿಸ್ಮಸ್ ಹಬ್ಬದ ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು. ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಸಿಬ್ಬಂದಿ ವರ್ಗದವರು ಸೇರಿ ಒಟ್ಟು 80 ಜನರು ಭಾಗವಹಿಸಿದರು.

## "ಮಾನಸಿಕ ಅಸ್ವಸ್ಥರಿಗೆ ಆಪ್ತ ಸಮಾಲೋಚನೆ ಮತ್ತು ಡಿಎಂಎಚ್‌ಪಿ ಕ್ಯಾಂಪ್"



05 ಡಿಸೆಂಬರ್ 2025ರಂದು ಹುಮ್ನಾಬಾದ್ ತಾಲೂಕಿನ ವಾಂಜಿರಿಎಲ್ಲಿ ಫಲಾನುಭವಿಗಳ ಮನೆ ಭೇಟಿ ಮಾಡಲು ಹೋದಾಗ ಮಾನಸಿಕ ಕಾಯಿಲೆಯಿಂದ ಬಳಲುತ್ತಿದ್ದ ರೇಣುಕ ಗಂಡ ವೀರರೆಡ್ಡಿ ಇವರನ್ನು ಪತ್ತೆಹಚ್ಚಲಾಯಿತು. ಮತ್ತು ಇವರನ್ನು ಡಿಎಂಎಚ್‌ಪಿ ಕ್ಯಾಂಪಿಗೆ ಕರೆದುಕೊಂಡು ಹೋಗಲಾಯಿತು. ಇವರು ತುಂಬಾ ಮಾನಸಿಕ ಕಾಯಿಲೆಯಾಗಿದ್ದು ಇವರ ಪದೇ ಪದೇ ಭೇಟಿ ಮಾಡಿ ಡಿಎಂಎಚ್‌ಪಿ ಕ್ಯಾಂಪಿಗೆ ಬರುವ ಹಾಗೆ ಮಾಡಲಾಯಿತು. ಇವರು ಮನೆಯಲ್ಲಿ ಎಲ್ಲರ ಜೊತೆ ಜಗಳ ಮಾಡುತ್ತಾರೆ. ಮನೆಯಲ್ಲಿ ಇವರಿಗೆ ಎರಡು ಗಂಡು ಮಕ್ಕಳಿದ್ದಾರೆ. ಗಂಡ ತುಂಬಾ ಸರಾಯಿ ಕುಡಿಯುತ್ತಾರೆ. ಮನೆಯಲ್ಲಿ ಊಟಕ್ಕೆ ಏನು ತರುವುದಿಲ್ಲ. ಹೀಗಾಗಿ ಇವರು ಮಾನಸಿಕ ಕಾಯಿಲೆಗೆ ಒಳಗಾಗಿದ್ದಾರೆ. ಇವರನ್ನು ಡಿಎಂಎಚ್‌ಪಿ ಕ್ಯಾಂಪಿಗೆ ಕರೆದುಕೊಂಡು ಇವರನ್ನು ಡಾಕ್ಟರ ಮೂಲಕ ಮೌಲ್ಯಮಾಪನ ಮಾಡಿಸಿ ಇವರಿಗೆ ಔಷಧಿಯನ್ನು ತೆಗೆದುಕೊಳ್ಳುವ ತಿಳಿಸಲಾಯಿತು. ಇವಾಗ ಇವರು ಆರೋಗ್ಯದಲ್ಲಿ ಸ್ವಲ್ಪ ಸುಧಾರಣೆ ಕಂಡುಕೊಂಡಿದ್ದಾರೆ ಈಗ ಮನೆಯಲ್ಲಿ ಸಣ್ಣ ಪುಟ್ಟ ಕೆಲಸಗಳು ಮಾಡುತ್ತಿದ್ದಾರೆ.

## "ಮಾನಸಿಕ ಅಸ್ವಸ್ಥರಿಗೆ ಆಪ್ತ ಸಮಾಲೋಚನೆ"



12 ಡಿಸೆಂಬರ್ 2025ರಂದು ಹುಮ್ನಾಬಾದ್ ತಾಲೂಕಿನ ಸಿಂಧಬಂದಗಿ ಗ್ರಾಮದಲ್ಲಿರುವ ಫಲಾನುಭವಿಯ ಮನೆ ಭೇಟಿ ಮಾಡಿ ಶ್ರೀಮತಿ ಉಮೇದ ಬಿ ಅವರಿಗೆ ಆಪ್ತ ಸಮಾಲೋಚನೆಗೆ ಒಳಪಡಿಸಲಾಯಿತು. ವೈದ್ಯರ ಸಲಹೆ ಮೇರೆಗೆ ನಿರಂತರವಾಗಿ ಮಾತ್ರೆಗಳನ್ನು ಸೇವನೆ ಮಾಡಬೇಕು. ಜನರೊಂದಿಗೆ ಬೆರೆಯುವುದರಿಂದ ಸಹ ಖಿನ್ನತೆಯ ಲಕ್ಷಣಗಳು ಕಡಿಮೆಯಾಗುವ ಸಾಧ್ಯತೆ ಇರುತ್ತದೆ. ಮತ್ತು ದಿನನಿತ್ಯದ ಚಟುವಟಿಕೆಯಲ್ಲಿ ಭಾಗವಹಿಸಿ ಮನೆಯ ಕೆಲಸ ಕಾರ್ಯಗಳಲ್ಲಿ ಪಾಲ್ಗೊಳ್ಳಬೇಕು ಎಂದು ಆಪ್ತ ಸಮಾಲೋಚನೆಯಲ್ಲಿ ಮಾಹಿತಿ ನೀಡಲಾಯಿತು.

# “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ”

## “ವಿಶ್ವ ವಿಶೇಷ ವಿಕಲಚೇತನರ ದಿನಾಚರಣೆ ಮತ್ತು ಪೌಷ್ಠಿಕ ಆಹಾರ ವಿತರಣೆ”



ವಿಶ್ವ ವಿಶೇಷ ವಿಕಲಚೇತನರ ದಿನಾಚರಣೆ ಹಾಗೂ ಕ್ರಿಸ್ಮಸ್ ಹಬ್ಬ ಆಚರಣೆ ಪ್ರಯುಕ್ತ ನ್ಯೂನ್ಯತೆಗೆ ಒಳಗಾಗಿರುವ ಮಕ್ಕಳಿಗೆ ಪೌಷ್ಠಿಕ ಆಹಾರ ವಿತರಣೆಯು 11 ಡಿಸೆಂಬರ್ 2025ರಂದು ಹುಮನಾಬಾದ್ ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಮಾಡಲಾಯಿತು. ಬೆಳವಣಿಗೆಯಲ್ಲಿ ಕುಂಟಿತ ಹೊಂದಿರುವ ಮಕ್ಕಳಲ್ಲಿ ವಿಶೇಷವಾಗಿರುವಂತಹ ಚೈತನ್ಯವನ್ನು ತುಂಬಿ ಸಮಾಜದಲ್ಲಿ ಸಾಮಾನ್ಯ ಮಕ್ಕಳು ಬದುಕಿ ಬಾಳಬೇಕೆಂಬ ಉದ್ದೇಶದಿಂದ ಹುಟ್ಟಿದ ಮಕ್ಕಳನ್ನು ಹಿಡಿದುಕೊಂಡು ಎಂಟು ವರ್ಷದ ಒಳಗಡೆ ಇರುವಂತಹ ಮಕ್ಕಳಿಗೆ ಸರ್ಕಾರದಿಂದ ಅನೇಕ ಯೋಜನೆಗಳಿಂದ ಮಕ್ಕಳಿಗೆ ಸೌಲಭ್ಯಗಳನ್ನು ಕಲ್ಪಿಸುವಂತಹ ಕಾರ್ಯವನ್ನು ನಮ್ಮ ಸಂಸ್ಥೆ ವತಿಯಿಂದ ಒದಗಿಸಿಕೊಡುತ್ತಿದ್ದೇವೆ. ಹಾಗೂ ಸಾಧನೆ ಸಲಕರಣೆಗಳು ಹಾಗೂ ಪೌಷ್ಟಿಕ ಆಹಾರವನ್ನು ವಿತರಣೆ ಮಾಡುತ್ತೇವೆ ಎಂದು ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ರವರು ಮಾಹಿತಿ ತಿಳಿಸಿದರು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಗಳಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಕಿ ಆಗಿರುವಂತ ಶ್ರೀಮತಿ ಮಲ್ಲಮ್ಮ ರವರು ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಜನಿಸುವುದಕ್ಕೆ ಪ್ರಮುಖವಾಗಿರುವಂತಹ ಕಾರ್ಯಗಳನ್ನು



ತಿಳಿಸಿದರು. ಬಾಲ್ಯವಿವಾಹ, ರಕ್ತ ಸಂಬಂಧದಲ್ಲಿ ವಿವಾಹ ಆಗುವುದರಿಂದ, ವಿಕಲಚೇತನರು ಮಕ್ಕಳು ಹುಟ್ಟುವ ಸಂಭವಿರುತ್ತದೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಮಹಿಳೆಯರಿಗೋಸ್ಕರ 5 ಯೋಜನೆಗಳಿದ್ದು ಅದರ ಸದುಪಯೋಗ ಪಡೆದುಕೊಳ್ಳುವಂತೆ ತಿಳಿಸಿದರು. ಅಪೌಷ್ಟಿಕತೆನೆ ತಡೆಗಟ್ಟೋದಕ್ಕೆ ಮನೆಯಲ್ಲೇ ನೆನೆಸಿರುವ ಕಾಳುಗಳನ್ನ ಮೊಳಕೆ ಬಂದಮೇಲೆ ಸೇವಿಸುವುದರಿಂದ ಅಪೌಷ್ಟಿಕತೆಯನ್ನು ಹೋಗಲಾಡಿಸಬಹುದು. ಹೆಚ್ಚು ಹೆಚ್ಚು ತರಕಾರಿಗಳು ಸೇವನೆ ಮಾಡುವುದರಿಂದ ಮಕ್ಕಳು ಮತ್ತು ತಾಯಂದಿರ ಆರೋಗ್ಯವಾಗಿರಲು ಸಾಧ್ಯವಾಗುತ್ತದೆ. ವಿಕಲಚೇತನ ಮಕ್ಕಳು ಹುಟ್ಟಿದ್ದರಿಂದ ನಿರ್ಲಕ್ಷ್ಯ ಮಾಡದೆ ಚಟುವಟಿಕೆಗಳ ಮುಖಾಂತರ ಬದಲಾವಣೆ ತರುವಂತ ಕೆಲಸ ಕಾರ್ಯಗಳು ಪಾಲಕರು ನಿರ್ವಹಿಸಬೇಕು. ಆರ್ಬಿಟ್ ಸಂಸ್ಥೆಯವರು ಉತ್ತಮವಾದ ಕೆಲಸ ಕಾರ್ಯಗಳು ಮಾಡಲಿದ್ದಾರೆಂದು ಹರ್ಷ ವ್ಯಕ್ತಪಡಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 54 ಜನರು ಭಾಗವಹಿಸಿದರು. ಕಾರ್ಯಕ್ರಮದ ನಿರೂಪಣೆ ಶ್ರೀಮತಿ ಮಮತಾ ಸಂಯೋಜಕರು, ಪ್ರಾರ್ಥನೆ ಶ್ರೀ ಸೂರ್ಯಕಾಂತ್ ಮತ್ತು ಶ್ರೀಮತಿ ಕವಿತಾ. ಸ್ವಾಗತ ಶ್ರೀ ಸೂರ್ಯಕಾಂತ್ ಮಾಡಿದರು.

## “ಮದರ್ ಚಾಂಪಿಯನ್ ಸೆಶನ್ ಕಾರ್ಯಕ್ರಮ”



11 ಡಿಸೆಂಬರ್ 2025ರಂದು ಹುಮ್ನಾಬಾದ್ ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಮದರ್ ಚಾಂಪಿಯನ್ ಸೆಶನ್ ನಡೆಸಲಾಯಿತು. 1988 ರಲ್ಲಿ ಸ್ಥಾಪಿತವಾದ ಈ ಕೇಂದ್ರವು RPWD ಕಾಯ್ದೆ 2016 ರಲ್ಲಿ ಉಲ್ಲೇಖಿಸಿರುವ ಎಲ್ಲಾ ವಿಧದ ಅಂಗ ವಿಕಲತೆಗಳಿಗೆ ಸೇವೆ ನೀಡುತ್ತಿದೆ. ಬಹುವಿಧ ನೀತಿನ ತಂಡ, ದೈಹಿಕ ಚಿಕಿತ್ಸಕರು, ವೃತ್ತಿ ಚಿಕಿಸ್ತಕರು, ಮಾತು ಶ್ರವಣ ತಜ್ಞರು, ಮನೋವೈಜ್ಞಾನಿಕ ಮತ್ತು ಸಾಮಾಜಿಕ ಕಾರ್ಯಕರ್ತರು, ಎಲ್ಲಾ ಅಂಗವಿಕಲತೆಗಳಿಗೆ ಸಂಬಂಧಿಸಿದ ಮಾಹಿತಿಗಾಗಿ ಒಂದು ನಿಲ್ಲುಗಡೆ ಸಮುದಾಯ ಕೇಂದ್ರ. ಆಡಿಯೋ ಮೆಟ್ರಿ, ಹೈಡ್ರೋಥೆರಪಿ, ಇಂಟಿಗ್ರೇಶನ್ ಮತ್ತು ಸಮಾಲೋಚನಾ ಮಾಡುವುದು. ಶ್ರವಣ ಮತ್ತು ಮಾತು ಭಾಷಾ ವಿಜ್ಞಾನ-ಕಾರ್ಯಾತ್ಮಕ ಮತ್ತು ವಾಚಕ ಸಂವಹನಕ್ಕಾಗಿ ಸಮಗ್ರ ತರಬೇತಿ ಘಟಕ, ರೋಗಿಗಳ ವೈಯಕ್ತಿಕ ಅಗತ್ಯತೆಗಳನ್ನು ಆಧರಿಸಿ ಸಂಪರ್ಕ ತಂತ್ರಗಳ ಅಳವಡಿಕೆ ಮತ್ತು ವಯಕ್ತಿಕ ವಿಧಾನಗಳು. ಶ್ರವಣ ತಪಾಸಣೆ ತಜ್ಞ ಮತ್ತು ಸಮತೋಲನ ಸಂಬಂಧಿತ ವೈಕುಲ್ಯಗಳನ್ನು ಗುರುತಿಸುವುದು ಮತ್ತು ಚಿಕಿತ್ಸೆ ನೀಡುವುದರಲ್ಲಿ ಪರಿಣತಿ ಹೊಂದಿರುವ ಆರೈಕೆ ವೃತ್ತಿಪರರು ಅವರು ಈ ಕೆಳಗಿನಂತೆ ವಿವಿಧ ಸೇವೆಗಳನ್ನು ನೀಡಬಹುದು-ಶ್ರವಣ ಪರೀಕ್ಷೆಗಳು, ಕಿವಿ ಹೇರ್ಗಳ ಅಳವಡಿಕೆ ಮತ್ತು ಹೊಂದಾಣಿಕೆ, ಕಿವಿಯ ಶಬ್ದ ಮತ್ತು ನಿರ್ವಹಣೆ, ಸಮತೋಲನ ಪರೀಕ್ಷೆ ಮತ್ತು ಪುನರ್ವಸತಿ, ಶ್ರವಣ ನಷ್ಟ ಮತ್ತು ಅದರ ತಡೆಗಟ್ಟುವಿಕೆ ಕುರಿತು ಸಮಾಲೋಚನೆ ಮತ್ತು ಜಾಗೃತಿ. ಸಂಪರ್ಕ ಪರಿಣಿತರಾಗಿದ್ದು ಎಲ್ಲಾ ವಯಸ್ಸಿನ ವ್ಯಕ್ತಿಗಳಲ್ಲಿ ಸಂಪರ್ಕ ವಿಕಲತೆಗಳು ಊಟ ಮತ್ತು ನುಂಗುವಿಕೆಯಿಂದ ಸಂಬಂಧಿಸಿದಂತೆ ವಿಕಲತೆಗಳನ್ನು ತಡೆಗಟ್ಟಲು ಮತ್ತು ಚಿಕಿತ್ಸೆಗಳ ಸಹಾಯ ಮಾಡುತ್ತಾರೆ. ಮಾತಿನ ಧ್ವನಿಗಳು, ಭಾಷೆ, ಸಾಮಾಜಿಕ ಸಂಪರ್ಕ, ಜ್ಞಾನಾತ್ಮಕ ಸಂಭಾಷಣೆ. ಸಂವಹನದ ವಿಧಗಳು-ಅವಶ್ಯಕತೆ ಆಧಾರಿತ ಸಂಪರ್ಕ, ಸಾಮಾಜಿಕ ಸಂಪರ್ಕ. ಹೀಗೆ ವಿವಿಧ ರೀತಿಯಿಂದ ಮಕ್ಕಳ ಮಾತಿನಲ್ಲಿ ಬದಲಾವಣೆಯನ್ನು ತರಬಹುದು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸೂರ್ಯಕಾಂತ್ ರವರು ಮಾಹಿತಿ ನೀಡಿದರು.

## “ಸರಕಾರಿ ಕನ್ಯಾ ಪ್ರೌಢಶಾಲೆ ರಾಜೇಶ್ವರ್ ಗ್ರಾಮದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಜಾಗೃತಿ”



03 ಡಿಸೆಂಬರ್ 2025ರಂದು ಬಸವಕಲ್ಯಾಣ ತಾಲೂಕಿನ ರಾಜೇಶ್ವರ ಗ್ರಾಮದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು ಸರಕಾರಿ ಕನ್ಯಾ ಪ್ರೌಢಶಾಲೆ ರಾಜೇಶ್ವರ್ ಗ್ರಾಮದಲ್ಲಿ ಜಾಗೃತಿ ಮೂಡಿಸಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯೋಪಾಧ್ಯಾಯರು ಶ್ರೀಮತಿ ದೇವಿಕ, ಶಾಲೆಯ ಶಿಕ್ಷಕರು 10 ಜನ ಭಾಗವಹಿಸಿದರು. ಬೆಳವಣಿಗೆಯಿಂದ ಕುಂಠಿತ ಹೊಂದಿರುವ 0 ರಿಂದ 8 ವರ್ಷದ ಮಕ್ಕಳಿಗೆ ಆರ್ಬಿಟ್ ಸಂಸ್ಥೆ ಕೇಂದ್ರದಲ್ಲಿ ಚಟುವಟಿಕೆ ಮಾಡುವ ಮುಖಾಂತರ ಬದಲಾವಣೆ ತರಲಿದ್ದೇವೆ. ಆರ್ಬಿಟ್ ಸಂಸ್ಥೆಯಲ್ಲಿ ಮಕ್ಕಳಿಗೆ ಉಪಯೋಗವಾಗುವಂತಹ ಸಾಧನೆ ಸಲಕರಣೆಗಳನ್ನು ವಿತರಣೆ ಮಾಡಿ ಮಕ್ಕಳಿಗೆ ಸಂಸ್ಥೆಯಲ್ಲಿ ಚಟುವಟಿಕೆ ಮಾಡುತ್ತಾ ಮಕ್ಕಳ ಭವಿಷ್ಯವನ್ನು ರೂಪಿಸಲಿದ್ದೇವೆ ಎಂದು ತಿಳಿಸಲಾಯಿತು. ಆದ್ದರಿಂದ ಅಂತಹ ಮಕ್ಕಳು ಕಂಡುಬಂದಲ್ಲಿ ಆರ್ಬಿಟ್ ಸಂಸ್ಥೆಗೆ ಕರೆಯ ಮುಖಾಂತರ ತಿಳಿಸುವುದಾಗಿ ಹೇಳಲಾಯಿತು. ಸರಕಾರದಿಂದ ವಿಶೇಷ ವಿಕಲಚೇತನರಿಗೆ ದೊರಕುವಂಥ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಲಾಯಿತು. ಕಾರ್ಯಕ್ರಮದಲ್ಲಿ ಒಟ್ಟು 150 ಜನ ಮಕ್ಕಳು ಭಾಗವಹಿಸಿ ಮಾಹಿತಿ ಪಡೆದುಕೊಂಡಿದ್ದಾರೆ.

## “ಮಹಿಳಾ ಸಬಲೀಕರಣ ಕಾರ್ಯಕ್ರಮ”

### “ನಾಯಕತ್ವ ಕುರಿತು ತರಬೇತಿ”




11 ಡಿಸೆಂಬರ್ 2025ರಂದು ದಾಡಗಿ ಗ್ರಾಮದಲ್ಲಿರುವ ಭೂಮಿತಾಯಿ ಮಹಾಸಂಗದ ಸದಸ್ಯರಿಗೆ ಮತ್ತು ಜೀವನದಾರ ಮತ್ತು ಸೌಭಾಗ್ಯ ಸಂಘದ ಸದಸ್ಯರಿಗೆ ನಾಯಕತ್ವದ ಕುರಿತು ತರಬೇತಿ ನೀಡಲಾಯಿತು. ಸಂಪನ್ಮೂಲ ವ್ಯಕ್ತಿಯಾದ ಅಂಗನವಾಡಿ ಕಾರ್ಯಕರ್ತೆಯಾದ ಶ್ರೀಮತಿ ವೈಶಾಲಿ ರವರು ನಾಯಕತ್ವ ಎಂದರೇನು? ನಾಯಕತ್ವದ ಗುಣಗಳು ಕುರಿತು ಮಾಹಿತಿ ನೀಡಿದ್ದರು. ನಾಯಕತ್ವ ಎಂದರೆ ಸಂಘ ಅಥವಾ ಮಹಾಸಂಘ ಮತ್ತು ಸಮುದಾಯದಲ್ಲಿ ಆಗು ಹೊಗುವಂತಹ ಸಣ್ಣಪುಟ್ಟ ಸಮಸ್ಯೆಗಳನು ಕೈಗೆತ್ತಿಕೊಳ್ಳುವುದರ ಮೂಲಕ ಮುಂದೆನಿಂತು ಕೆಲಸ ಕಾರ್ಯಗಳಲ್ಲಿ ಭಾಗವಹಿಸಿ ಬಗೆಹರಿಸುವುದು. ಮತ್ತು ಜಗಳಗಳನ್ನು ತಡೆಗಟ್ಟುವ ರೀತಿಯಲ್ಲಿ ನಾಯಕತ್ವವನ್ನು ಹೊಂದಿರಬೇಕು ಎಂದು ತಿಳಿಸುದರು. ನಾಯಕತ್ವದ ಗುಣಗಳು ಆಲಿಸುವಂತಿರಬೇಕು, ಶಾಂತಿ, ಸಮಾಧಾನ, ಧೈರ್ಯ, ಸಹನೆ ಹೊಂದಾಣಿಕೆಗಳೊಂದಿಗೆ ನಾಯಕತ್ವಗಳನ್ನು ಬೆಳೆಸಿಕೊಂಡು ಮುಂದೆನಿಂತು ಕೆಲಸ ಕಾರ್ಯಗಳಲ್ಲಿ ಮಾಡಿಸುವುದರ ಮುಖಾಂತರ ಹಲವಾರು ಕೆಲಸ ಕಾರ್ಯಗಳಲ್ಲಿ ಭಾಗವಹಿಸಿ ಎಂದು ಹೇಳಿದರು. ಒಟ್ಟು 25 ಸದಸ್ಯರು ನಾಯಕತ್ವದ ಕುರಿತು ತರಬೇತಿಯನ್ನು ಪಡೆದುಕೊಂಡರು 15 ಸದಸ್ಯರು ನಾಯಕತ್ವದ ಗುಣಗಳನ್ನು ಹೊಂದುತ್ತೇವೆಂದು ನಿರ್ಧರಿಸಿದ್ದಾರೆ.

### “ಪಂಚಾಯತ್ ರಾಜ್ ಕುರಿತು ತರಬೇತಿ”




9 ಡಿಸೆಂಬರ್ 2025ರಂದು ಬಾಲ್ಕಿ ತಾಲೂಕಿನ ಧನ್ನೂರ ಗ್ರಾಮದಲ್ಲಿರುವ ಎಸ್ತಾರ ಮತ್ತು ಮೇರಿ ಸ್ವಸಹಾಯ ಸಂಘದ ಸದಸ್ಯರಿಗೆ ಒಟ್ಟು ಸೇರಿಸಿ ಪಂಚಾಯತ್ ರಾಜ್ ಕುರಿತು ತರಬೇತಿ ನೀಡಲಾಯಿತು. ಇದರ ಉದ್ದೇಶ ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸಲು ಆಶಕ್ತಿಯುಳ್ಳ ಮಹಿಳೆಯರು ಈ ಒಂದು ಚುನಾವಣೆಯಲ್ಲಿ ಭಾಗವಹಿಸಲು ಅಥವಾ ಸಿದ್ಧತೆ ಮಾಡಲು ತಿಳಿಸಲಾಯಿತು. ಉದಾಹರಣೆ ಮಾತನಾಡುವ ಚತುರತೆ, ಉತ್ತಮ ಬಟ್ಟೆ ಧರಿಸುವುದು, ಅಧಿಕಾರಿಗಳ ಜೊತೆ ಒಳ್ಳೆಯ ಸಂಬಂಧ ಮತ್ತು ಜನರನ್ನ ಒಟ್ಟು ಸೇರಿಸಿ ನಿರ್ಧರಿಸುವುದು. ಹಾಗೂ ನಾಯಕತ್ವ ಗುಣಗಳನ್ನು ಅವರಲ್ಲಿಂದ ಬೆಳೆಸಿಕೊಳ್ಳುವುದು ಜೊತೆಗೆ ಸಮಾಜಸೇವೆ ಮಾಡುವ ವ್ಯಕ್ತಿಯಾಗಿರಬೇಕು. ನಿಸ್ವಾರ್ಥ ಸೇವೆ ಸಲ್ಲಿಸಬೇಕು. ಹಾಗೂ ಸರ್ಕಾರದಿಂದ ಬರುವ ಯೋಜನೆಗಳನ್ನು ಜನರಿಗೆ ತಲುಪುವಂಥವರಾಗಿರಬೇಕು. ಮತ್ತು ಸೇವೆ ಮನೋಭಾವನೆ ಅವರಲ್ಲಿರುವುದು ಇತ್ಯಾದಿ ವಿಷಯಗಳನ್ನ ತಿಳಿಸಲಾಯಿತು. ಪಂಚಾಯತ್ ರಾಜ್ ತರಬೇತಿಯಲ್ಲಿ ಒಟ್ಟು 12 ಸದಸ್ಯರು ಭಾಗವಹಿಸಿದ್ದರು. ಎರಡು ಸದಸ್ಯರು ಮುಂಬರುವ ಚುನಾವಣೆಯಲ್ಲಿ ನಾವು ನಿಲ್ಲುತ್ತೇವೆ ಎಂದು ಸಭೆಯಲ್ಲಿ ತೀರ್ಮಾನ ತೆಗೆದುಕೊಂಡಿದ್ದರು. ನಿರ್ಮಲ ಮತ್ತು ಪವಿತ್ರ ಸರಿಯಾಗಿ ಒಂದು ಗಂಟೆಗೆ ಸಭೆಯು ಪವಿತ್ರ ಅವರು ಧನ್ಯವಾದ ಮೂಲಕ ಮುಕ್ತಾಯ ಮಾಡಲಾಯಿತು.

## "ಬೆಳದಿಂಗಳು ಜಿಲ್ಲಾ ಒಕ್ಕೂಟದ ಸಭೆ"



04 ಡಿಸೆಂಬರ್ 2025ರಂದು ಆರ್ಬಿಟ್ ಸಂಸ್ಥೆ ಹುಮ್ನಾಬಾದ್‌ನಲ್ಲಿ ಬೆಳದಿಂಗಳು ಜಿಲ್ಲಾ ಒಕ್ಕೂಟದ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ಸಭೆಯನ್ನು ಸಂವಿಧಾನ ಪೀಠಿಕೆ ಓದುವುದರ ಮುಖಾಂತರ ಪ್ರಾರಂಭಿಸಿ ಎಲ್ಲರಲ್ಲಿ ಭ್ರಾತೃತ್ವ ಭಾವನೆಯನ್ನು ಮೂಡಿಸಲಾಯಿತು. ತದನಂತರ ಶ್ರೀಮತಿ ನಿರ್ಮಲ ಮಹಿಳಾ ಸಬಲೀಕರಣ ಯೋಜನೆ ಜಿಲ್ಲಾ ಒಕ್ಕೂಟ ಬಲವರ್ಧನೆ ಕುರಿತು ತಿಳಿಸುತ್ತಾ ಎಲ್ಲರೂ ನಾಯಕತ್ವ ಜವಾಬ್ದಾರಿಯನ್ನು ತೆಗೆದುಕೊಂಡು ತಮ್ಮ ತಮ್ಮ ಮಹಾಸಂಗಗಳಲ್ಲಿ ಮತ್ತು ಒಕ್ಕೂಟಗಳಲ್ಲಿ ಸೂಕ್ತ ಕ್ರಿಯೆ ಯೋಜನೆಗಳೊಂದಿಗೆ ಕೆಲಸ ಕಾರ್ಯಗಳು ನಿರ್ವಹಿಸಿ ರಾಜ್ಯ ಮಾಲಿನಿ ಒಕ್ಕೂಟಕ್ಕೆ ಸ್ಥಳೀಯ ಸಂಪನ್ಮೂಲ ಕ್ರೂಡೀಕರಣ ಮಾಡುವುದರ ಕುರಿತು ಸೂಚನೆ ನೀಡಿದರು. ಜಿಲ್ಲಾ ಒಕ್ಕೂಟದ ಮಹಿಳೆಯರು ಮತ್ತು ಕಾರ್ಯಕರ್ತರು ಭಾಗವಹಿಸಿ ಜಿಲ್ಲಾ ಒಕ್ಕೂಟದ ಸಭೆಯನ್ನು ಯಶಸ್ವಿಗೊಳಿಸಿದರು.

## "ಸ್ವ-ಉದ್ಯೋಗದಲ್ಲಿ ತೊಡಗಿಕೊಂಡು ಆರ್ಥಿಕ ಮಟ್ಟದಲ್ಲಿ ಸುಧಾರಣೆ"



12 ಡಿಸೆಂಬರ್ 2025ರಂದು ಚಿಟಗುಪ್ಪ ತಾಲೂಕಿನ ವಡ್ಡನಕೇರಾ ಗ್ರಾಮದದಲ್ಲಿರುವ ಸರೋಜಿವನಿ ಸಂಘದ ಸದಸ್ಯರಾದ ಶ್ರೀಮತಿ ಇಂದಿರಬಾಯಿ ಗಂಡ ಜಗನಾಥ್, ಇವರ ಆರ್ಬಿಟ್ ಸಂಸ್ಥೆಯವರು ಸಂಸ್ಥೆಯ ರಚನೆ ಮಾಡಿದ ಸಂಘದಲ್ಲಿ ಸೇರಿ ಸುಮಾರು 20 ವರ್ಷಗಳಾಯಿತು. ಸಂಘದಿಂದ 50,000 ಸಾಲ ತೆಗೆದುಕೊಂಡು ಒಂದು ಎಮ್ಮೆಯನ್ನು ಖರೀದಿಸಿದರು, ಅವು ಮರಿ ಹಾಕಿರುತ್ತವೆ, ಎಮ್ಮೆಗಳು ದಿನಕ್ಕೆ ಆರು ಲೀಟರ್ ಹಾಲು ಕೊಡುತ್ತಿವೆ. ಇವುಗಳನ್ನು ಸೊಸೈಟಿಗೆ ಹಾಕಿದಾಗ ತಿಂಗಳಿಗೆ 8000 ಬರುತ್ತಿದೆ. ಹಾಗೆ ಸಂಘದಿಂದ 20,000 ಸಾಲ ತೆಗೆದುಕೊಂಡು ಎರಡು ಕುರಿಗಳನ್ನು ಖರೀದಿ ಮಾಡಿದರು. ಅವುಗಳು ಮರಿ ಹಾಕಿದ್ದರಿಂದ ಈಗ ಒಟ್ಟು 12 ಕುರಿಗಳಾಗಿವೆ ಎಮ್ಮೆ ಮತ್ತು ಕುರಿಗಳನ್ನು ಇಟ್ಟುಕೊಂಡು ಸ್ವ-ಉದ್ಯೋಗದಲ್ಲಿ ತೊಡಗಿರುತ್ತಾರೆ. ಇದರಿಂದ ಅವರ ಕುಟುಂಬದ ಆರ್ಥಿಕ ಮಟ್ಟದ ಸುಧಾರಣೆಯಾಗಿದೆ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಲು ಮತ್ತು ಮನೆ ಕಟ್ಟಿಕೊಳ್ಳಲು ಸಹಾಯವಾಗಿದೆ ಎಂದು ಅಭಿನಂದನೆ ತಿಳಿಸಿರುತ್ತರೆ.

## "ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆಯ ಕುರಿತು ತರಬೇತಿ"



10 ಡಿಸೆಂಬರ್ 2025ರಂದು ಚಿಟಗುಪ್ಪ ಭಾಸ್ಕರ್ ನಗರದಲ್ಲಿ ಕಮಲಾ ಮಹಾಸಂಗದ ಸದಸ್ಯರಿಗೆ ಶ್ರೀಮತಿ ರೀಟಾ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರು ಜಾಗತಿಕ ತಾಪಮಾನ ಮತ್ತು ಹವಾಮಾನ ಬದಲಾವಣೆಯ ಕುರಿತು ತರಬೇತಿಯನ್ನು ಹಮ್ಮಿಕೊಂಡಿದ್ದರು. ಪರಿಸರದಲ್ಲಾಗುವ ಬದಲಾವಣೆ ಅಂದರೆ ಬಿಸಿಲು, ಗಾಳಿ, ನೀರು, ಮಣ್ಣು ಇವೆಲ್ಲವನ್ನು ಪರಿಸರ ಎಂದು ಕರೆಯುತ್ತೇವೆ. ಕೃಷಿ ಉತ್ತಮ ರೀತಿಯಲ್ಲಿ ಫಲ ಕೊಡಬೇಕಾದರೆ ಮಣ್ಣು ಅತ್ಯಂತ ಮಹತ್ವದ್ದು ಹಾಗಾಗಿ ಫಲವತ್ತಾದ ಮಣ್ಣನ್ನು ಬಳಸಿ ಬೆಳೆಯನ್ನು ಬೆಳೆಸಲು ಮಾಹಿತಿ ನೀಡಲಾಯಿತು. ಕಪ್ಪುಮಣ್ಣು. ಕೆಂಪು ಮಣ್ಣು. ಜೇಡಿಮಣ್ಣು ಮಣ್ಣಿನ ವಿಧಗಳನ್ನು ತಿಳಿಸಲಾಯಿತ್ತು. ಯಾವ ಮಣ್ಣಿನಲ್ಲಿ ಎಂತಹ ಬೆಳೆಗಳು ಬೆಳೆಯುತ್ತವೆ ಎಂಬುದನ್ನು ಅರಿತುಕೊಂಡು ವ್ಯವಸಾಯ ಮಾಡುವಂತೆ ಕರೆ ನೀಡಲಾಯಿತು. ಕೈತೋಟ ನಿರ್ಮಾಣ ಮಾಡಿಕೊಂಡು ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಲು ತಿಳಿಸಲಾಯಿತು. ಕಮಲ ಮಹಾಸಂಗದ 12 ಜನ ಮಹಿಳೆಯರು ಭಾಗವಹಿಸಿ ಸಂಪೂರ್ಣ ಮಾಹಿತಿ ತಿಳಿದುಕೊಂಡರು.

## "ಶಾಲೆಯ ಮಕ್ಕಳಿಗೆ ನಾಯಕತ್ವ ಕುರಿತು ತರಬೇತಿ"



12 ಡಿಸೆಂಬರ್ 2025ರಂದು ಬೀದರ ತಾಲೂಕಿನ ಚಿಟ್ಟ ಗ್ರಾಮದಲ್ಲಿ ಸರ್ಕಾರಿ ಪ್ರೌಢ ಶಾಲೆಯ ಮಕ್ಕಳಿಗೆ ಆರ್ಬಿಟ್ ಸಂಸ್ಥೆಯ ಜನ ಜಾಗೃತಿ ಮಂಚ್ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ರೋಸಮೇರಿ ಅವರು ಶಾಲೆಯ ಮಕ್ಕಳಿಗೆ ನಾಯಕತ್ವ ಕುರಿತು ತರಬೇತಿ ನೀಡಿದರು. ಈ ತರಬೇತಿಯಲ್ಲಿ ನಾಯಕರಾಗಬೇಕಾದರೆ ನಾಯಕತ್ವದ ಗೂಣಗಳು ಗೋದ್ದಿರಬೇಕು. ಸಮಾಜದಲ್ಲಿ ಆಗುವ ಒಳ್ಳೆಯ ಹಾಗೂ ಸಮಾಜದ ಸುಧಾರಣೆಯ ಬಗ್ಗೆ ತಿಳಿದುಕೊಂಡು ಸಮಸ್ಯಗಳು ಪರಿಹರಿಸಲು ಮುಂದಾಗಬೇಕು ಎಂದು ತಿಳಿದಿರಬೇಕು. ಮತ್ತು ಉತ್ತಮ ನಾಯಕತ್ವಕ್ಕೆ ಬಹಳಷ್ಟು ಗುಣಗಳು ಮುಖ್ಯವಾಗಿದೆ. ಉದಾಹರಣೆಗೆ ತಂಡ ಪ್ರೇರಣೆ ಶಕ್ತಿ ಪ್ರಾಮಾಣಿಕತೆ ನಿಷ್ಠೆ ಹೊಂದಿರಬೇಕು ಎಂದು ತಿಳಿಸಿದರು.

## “ಲಿಂಗ ಸಮಾನತೆ ಕುರಿತು ತರಬೇತಿ”




17 ಡಿಸೆಂಬರ್ 2025ರಂದು ಬಾಲ್ಕಿ ತಾಲೂಕಿನ ಜೋಳದಪ್ಪಗಾ ಗ್ರಾಮದಲ್ಲಿರುವ ಸ್ವಸಹಾಯ ಸಂಘದ ಸದಸ್ಯರಿಗೆ ಲಿಂಗ ಸಮಾನತೆ ಕುರಿತು ತರಬೇತಿ ಏರ್ಪಡಿಸಲಾಯಿತು. ಈ ತರಬೇತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳಾಗಿರುವ ಶ್ರೀಮತಿ ಇಂದುಮತಿ ಲಿಂಗ ಪ್ರೇರಣ ತಂಡದ ಸದಸ್ಯರು ಮತ್ತು ಮಹಿಳಾ ಸಬಲೀಕರಣ ಯೋಜನೆ, ಸಂಯೋಜಕಿ ಶ್ರೀಮತಿ ನಿರ್ಮಲ ಅವರು ಹಾಗೂ ಎಲ್. ಎಲ್. ಎಲ್. ಎಫ್ ಕಾರ್ಯಕರ್ತರಾದ ಶ್ರೀ ಪ್ರಕಾಶ್ ಮತ್ತು ಮಹಿಳಾ ಸಬಲೀಕರಣ ಕಾರ್ಯಕರ್ತರಾದ ಶ್ರೀ ಪ್ರಭು ಭಾಗವಹಿಸಿದರು. ಪ್ರಾರ್ಥನೆ ಗೀತೆ ಕವಿತಾ ಹಾಗೂ ಸಂಗಡಿಗರು ತದನಂತರ ಶ್ರೀ ಪ್ರಭು ಸರ್ ಸ್ವಾಗತ ಮೂಲಕ ತರಬೇತಿಯು ಪ್ರಾರಂಭಿಸಲಾಯಿತು. ಈ ತರಬೇತಿಯ ಮುಖ್ಯ ಉದ್ದೇಶ ಶ್ರೀಮತಿ ಇಂದುಮತಿ ಲಿಂಗ ಎಂದರೇನು? ಮತ್ತು ಲಿಂಗತ್ವ ಬಗ್ಗೆ ಸ್ಪಷ್ಟವಾಗಿ ವಿವರಿಸಿದ್ದರು. ನಾವು ಕುಟುಂಬದಿಂದಲೇ ಈ ಸಮಾನತೆಯನ್ನು ಪ್ರಾರಂಭಿಸಬೇಕು ತದನಂತರ ವಠಾರದಲ್ಲಿ ಸಮಾಜದಲ್ಲಿ ಮಾಡಲು ಸಾಧ್ಯ. ವಿಶೇಷವಾಗಿ ಮಹಿಳೆಯರಿಗೆ ಶಿಕ್ಷಣ ಮತ್ತು ಸಮಾನತೆ ಅತಿ ಮುಖ್ಯವಾಗಿದೆ. ನಾವು ಹಳ್ಳಿಗಳಲ್ಲಿ ನೋಡಬೇಕಾದರೆ ಪುರುಷರಿಗೆ ಬಹಳ ಮಹತ್ವವನ್ನು ಕೊಡುತ್ತೇವೆ. ಉದಾಹರಣೆ ಹುಡುಗರಿಗೆ ಹೆಚ್ಚಾಗಿ ಶಿಕ್ಷಣ ಕೊಡಲು ಪ್ರಯತ್ನಿಸುತ್ತೇವೆ. ಆದರೆ ಮಹಿಳೆಯರಿಗೆ ಮಾತ್ರ ಕಡಿಮೆ ಶಿಕ್ಷಣವನ್ನು ಕೊಡುತ್ತೇವೆ. ಇದಕ್ಕೆ ಕಾರಣ ತಂದೆ ತಾಯಿಗಳು. ಅದೇರೀತಿ ಸಮಾನತೆಯಲ್ಲಿ ಕೂಡ ಪುರುಷರಿಗೆ ಹೆಚ್ಚು ಗೌರವ ಕೊಡುತ್ತೇವೆ. ಆದರೆ ಮಹಿಳೆಯರಿಗೆ ಇಲ್ಲ ಎಂದು ಅನೇಕ ಉದಾಹರಣೆಗಳ ಮುಖಾಂತರ ತಿಳಿಸಿದರು. ತದನಂತರ ಶ್ರೀ ಪ್ರಕಾಶ್ ಸರ್ ನಾವು ಸಮಾಜದಲ್ಲಿ ಹೆಣ್ಣು ಮಕ್ಕಳನ್ನು ಕೀಳ ಮಟ್ಟದಲ್ಲಿ ಕಾಣುತ್ತಿದ್ದೇವೆ, ಅವರನ್ನು ಒಳ್ಳೆಯ ಅವರಿಗೆ ಸಮಾನತೆ ಸ್ಥಾನಮಾನ ಗೌರವ ಕಡಿಮೆ ಇದೆ ಮೊದಲಿಗೆ ರಾಜ ಮಹಾರಾಜರ ಸಮಯದಲ್ಲಿ ಗಂಡ ಸತ್ತರೆ ಹೆಂಡತಿ ಕೂಡ ಅಗ್ನಿ ಪ್ರವೇಶ ಮಾಡಬೇಕಿತ್ತು. ಮತ್ತು ಶುಭ ಸಮಾರಂಭದಲ್ಲಿ ವಿಧವೇರನ್ನು ನಾವು ಸೇರಿಸಿಕೊಳ್ಳುವುದು ತುಂಬಾ ಕಡಿಮೆ ಎಂದು ಹೇಳಿದ್ದರು. ತದನಂತರ ಮಹಿಳಾ ಸಬಲೀಕರಣ ಸಂಯೋಜಿಕರಾದ ಶ್ರೀಮತಿ ನಿರ್ಮಲಾ ಅವರು ಲಿಂಗತ್ವ ಬಗ್ಗೆ ವಿಸ್ತರಿಸಿದ್ದರು. ಇದು ದೇವರಿಂದ ಬಂದ ಕೊಡುಗೆ ಇದನ್ನು ನಾವು ಎಷ್ಟೇ ಪ್ರಯತ್ನ ಪಟ್ಟರು ಬದಲಿಸಲು ಆಗಿರುವುದಿಲ್ಲ. ಅದಕ್ಕೆ ನಾವು ಹೇಗೆ ಇರಬೇಕು ಎಂಬುದನ್ನ ತಿಳಿಸಿದರು. ಜೊತೆಗೆ ಸಮಾಜದಲ್ಲಿ ಮಹಿಳೆಯರಿಗೆ ಉತ್ತಮ ಸ್ಥಾನಮಾನ ಇದೆ ಅದಕ್ಕೆ ಒಳ್ಳೆಯ ಶಿಕ್ಷಣ ಕೊಡಿಸಿ ಮಹಿಳೆಯರಿಗೆ ಹೆಚ್ಚಿನ ಗೌರವ ನೀಡಬೇಕು ಎಂದು ತಿಳಿಸಿದರು. ಈ ಸಭೆಯಲ್ಲಿ 25 ಮಹಿಳೆರು ಭಾಗವಹಿಸಿದ್ದರು.

## “ಮೇರಿ ಮಹಾಸಂಗದ ಮಹಿಳೆಯರಿಗೆ ನಾಯಕತ್ವ ಕುರಿತು ತರಬೇತಿ”




ಹುಮ್ನಾಬಾದ್ ತಾಲೂಕಿನ ಒತ್ತಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ಸವಿತಾ ರವರು 5 ಡಿಸೆಂಬರ್ 2025ರಂದು ಮೇರಿ ಮಹಾಸಂಗದ ಮಹಿಳೆಯರಿಗೆ ನಾಯಕತ್ವ ಕುರಿತು ತರಬೇತಿಯನ್ನು ನಡೆಸಲಾಗಿದ್ದು, ನಾಯಕತ್ವ ಗುಣಗಳೆಂದರೆ ಬದುಕು ರೂಪಿಸುವ ಮೆಟ್ಟಿಲು ಒಂದು ತಂಡವಾಗಿ ಕೆಲಸ ಮಾಡಬೇಕಾದರೆ ತಾಳ್ಮೆ ಸಹನೆ ಪ್ರೀತಿ ಬಹಳ ಮುಖ್ಯವಾಗಿದೆ. ನಾಯಕ ಮತ್ತು ನಾಯಕಿ ಎಂದರೆ ಮುಂದೆ ಇದ್ದು ಕೈ ಹಿಡಿದು ಮುನ್ನಡೆಸುವವರು. ಒಟ್ಟಾಗಿ ಕೆಲಸ ಮಾಡುವ ನಾವೆಲ್ಲರೂ ಒಂದೇ ಎಂಬ ಭಾವವನ್ನು ಬೆಳೆಸುವ ಗುಣ ನಾಯಕರಲಿರಬೇಕು. ಹಾಗೆಯೇ ನಂಬಿಕೆ ಆತ್ಮವಿಶ್ವಾಸ ನಾಯಕತ್ವದ ಮೊದಲ ಹೆಜ್ಜೆ ಎಂಬುದನ್ನು ಅರಿತು ಇತರರಲ್ಲಿ ಆಸಕ್ತಿಯನ್ನು ತುಂಬುವುದು ಮತ್ತು ಗೌರವಿಸುವುದು ಎಂಬ ಹಲವಾರು ವಿಷಯಗಳನ್ನು ನೀಡುವುದರೊಂದಿಗೆ ಅರಿವನ್ನು ಮೂಡಿಸಲಾಯಿತ್ತು. ಅರಿವಿನ ಹಾಡು, ಚಟುವಟಿಕೆ, ಸಂಭಾಷಣೆ ಮೂಲಕ ಮಹಿಳೆಯರಿಗೆ ಜ್ಞಾನ ಮೂಡಿಸಲಾಯಿತು. ಇದರಲ್ಲಿ 21 ಸದಸ್ಯರು ಭಾಗವಹಿಸಿ ನಾಯಕರಲ್ಲಿರುವಂತಹ ಗುಣಲಕ್ಷಣಗಳ ಕುರಿತು ಮಾಹಿತಿಯನ್ನು ಪಡೆದುಕೊಂಡರು.

## “ನವಜೀವನ (ಎಲ್.ಎಲ್. ಎಲ್. ಎಫ್) ಕಾರ್ಯಕ್ರಮ”

## “ಗ್ರಾಮ ಪಂಚಾಯತ್‌ನಲ್ಲಿ ಮಾನಸಿಕ ಅಸ್ವಸ್ಥರ ಅರಿವಿನ ಕಾರ್ಯಕದೆಮ”



ಔರಾದ್ ತಾಲೂಕಿನ ದುಪತ ಮಹಾಗಾಂವ್ ಗ್ರಾಮದ ಗ್ರಾಮ ಪಂಚಾಯತ್‌ನಲ್ಲಿ ಸಂಸ್ಥೆಯ ಲಿವ್. ಲವ್. ಲಾಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ. ಯೋಹಾನ್ ರವರು ಅರಿವು ಮೂಡಿಸುವ ಕಾರ್ಯಕ್ರಮ ಹಮ್ಮಿಕೊಂಡರು. ಇದರಲ್ಲಿ ಸಂಸ್ಥೆಯು ನಡೆದುಬಂದ ಹಾದಿಯ ವಿವರಿಸಿದರು. ಜಿಲ್ಲೆಯಲ್ಲಿ ನೀಡುತ್ತಿರುವ ಸೇವೆಯ ಕುರಿತು ತಿಳಿಸಲಾಯಿತು. ಮಾನಸಿಕ ಆರೋಗ್ಯದ ಪ್ರಾಮುಖ್ಯತೆ ಹಾಗೂ ಅದನ್ನು ಕಾಪಾಡಿಕೊಳ್ಳುವ ರೀತಿಯನ್ನು ವಿವರಿಸಲಾಯಿತು. ಗ್ರಾಮದಲ್ಲಿ ಪತ್ತೆಯಾಗಿರುವ ಮಾನಸಿಕ ಅಸ್ವಸ್ಥರನ್ನು ಹೇಗೆ ತಪಾಸಣೆಗೆ ಒಳಪಡಿಸಲಾಯಿತು ಹಾಗೂ ಅವರ ಆರೋಗ್ಯ ಸುಧಾರಣೆ ಹೇಗೆ ಇದೆ ಎಂಬ ಮಾಹಿತಿ ನೀಡಲಾಯಿತು. ಇದರಲ್ಲಿ ಪಂಚಾಯಿತಿಯ 14 ಸದಸ್ಯರು ಭಾಗಿಯಾದರು.

## “ಮಾನಸಿಕ ಅಸ್ವಸ್ಥರ ಅರಿವಿನ ಕಾರ್ಯಕದೆಮ”



ಬಸವಕಲ್ಯಾಣ ತಾಲೂಕಿನ ನಾರಾಯಣಪುರ ಗ್ರಾಮದ ಗ್ರಾಮ ಪಂಚಾಯಿತಿಯಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಶ್ರೀ. ಮಹದೇವ ರವರು ಜಾಗೃತಿ ಕಾರ್ಯಕ್ರಮವನ್ನು ನಡೆಸಿದರು. ಕಳೆದ 32 ವರ್ಷಗಳಿಂದ ಸಂಸ್ಥೆಯು ಮಹಿಳೆಯರ ಅಭಿವೃದ್ಧಿಗಾಗಿ, ಬೆಳವಣಿಗೆ ಕುಂಟಿತ ಮಕ್ಕಳಿಗಾಗಿ ಹಾಗೂ ಮಾನಸಿಕ ಅಸ್ವಸ್ಥಗೊಂಡ ವ್ಯಕ್ತಿಗಳಿಗೆ ಹೇಗೆ ಸೇವೆ ನೀಡುತ್ತಿದೆ ಎಂಬುದರ ಮಾಹಿತಿ ನೀಡಿದರು. ಸರ್ಕಾರದ ವತಿಯಿಂದ ನಡೆಸಲಾಗುತ್ತಿರುವ ಮಾನಸಿಕ ಆರೋಗ್ಯ ಶಿಬಿರದಲ್ಲಿ ನೀಡಲಾಗುವ ಚಿಕಿತ್ಸೆ ಹಾಗೂ ಅವರು ಪಡೆಯಬಹುದಾದ ಮಾಸಿಕ ವೇತನದ ಕುರಿತು ತಿಳಿಸಲಾಯಿತು. ಪಂಚಾಯಿತಿ ವತಿಯಿಂದ ಸಂಪೂರ್ಣ ಸಹಕಾರ ನೀಡುವರು ಎಂಬ ಆಶ್ವಾಸನೆಯ ನುಡಿಯೊಂದಿಗೆ ಈ ಕಾರ್ಯಕ್ರಮವನ್ನು ಅಂತ್ಯಗೊಳಿಸಲಾಯಿತು.

## “ವಿಶೇಷ ವಿಕಲ ಚೇತನರ ಸಭೆ”



ಲಿವ್. ಲವ್. ಲಾಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ. ಸುನಿಲ್ ರವರು ಔರಾದ್ ತಾಲೂಕಿನ ಲಿಂಗಿ ಗ್ರಾಮದಲ್ಲಿ ವಿಶೇಷ ಚೇತನರ ಸಭೆಯನ್ನು ನಡೆಸಿದರು. ಈ ಸಭೆಯ ಉದ್ದೇಶ ಸರಕಾರದಿಂದ ಸಿಗುಬ ಸವಲತ್ತುಗಳು ಹೇಗೆ ಪಡೆದುಕೊಳ್ಳಬೇಕು ಮತ್ತು ಅದನ್ನು ಪಡೆಯುವದಕ್ಕೆ ನಮಗೆ ಎನೆಲ್ಲಾ ಕಾರ್ಯಗಳು ಮಾದಬೇಕು ಎಂಬುವುದರ ಬಗ್ಗೆ ತಿಳಿಸಲಾಯಿತು. ಅದರ ಸದುಪಯೋಗ ಎಲ್ಲರು ಪಡೆಯಬೇಕು ಎಂದು ಸ್ಪಷ್ಟನೆ ನೀಡಿದರು. ತದನಂತರ ಪ್ರತಿಯೊಬರ ಆಧಾರ್ ಕಾರ್ಡ್, ಮಾಸಿಕವೇತನದ ಪರಿಶೀಲನೆ ನಡೆಸಲಾಯಿತು. ಇನ್ನು ಅದರ ಉಪಯೋಗ ಪಡೆಯದಿರುವ ಫಲನುಭವಿಗಳಿಗೆ ಪಡೆದುಕೊಳ್ಳುವ ರೀತಿ ತಿಳಿಸಲಾಯಿತು. ಈ ಸಭೆಯಲ್ಲಿ 07 ಜನ ಭಾಗಿಯಾದರು.

## “ವಿಶೇಷ ಚೇತನರ ಸಭೆ ಹಕ್ಕುಗಳು ಹಾಗೂ ಕರ್ತವ್ಯಗಳ ಕುರಿತು ಮಾಹಿತಿ”

03 ಡಿಸೆಂಬರ್ 2025ರಂದು ಬೀದರ್ ತಾಲೂಕಿನ ಮನ್ನಳ್ಳಿ ಗ್ರಾಮದಲ್ಲಿ ವಿಶೇಷ ಚೇತನರ ಸಭೆಯನ್ನು ಹಮ್ಮಿಕೊಳ್ಳಲಾಯಿತು. ಆರ್ಬಿಟ್ ಸಂಸ್ಥೆ ಹಾಗೂ ಲಿವ್. ಲವ್. ಲಾಫ ಫೌಂಡೇಶನ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ ನೋಹಾನ್ ರವರು ವಿಶೇಷ ಚೇತನರ ಸಭೆಯನ್ನು ಉದ್ದೇಶಿಸಿ ಮಾತನಾಡಿ ಸಭೆಗೆ ಬಂದವರ ಆರೋಗ್ಯವನ್ನು ವಿಚಾರಿಸಿ ಅವರಿಗೆ ತಮ್ಮ ಹಕ್ಕುಗಳು ಹಾಗೂ ಕರ್ತವ್ಯಗಳ ಕುರಿತು ತಿಳಿಸಿದರು. ಸರ್ಕಾರದಿಂದ ಸಿಗುವಂತಹ 5% ಪ್ರತಿಶತ ಸೌಲಭ್ಯಗಳು, ಯುಡಿಐಡಿ ಕಾರ್ಡ್, ಮಾಸಿಕ ಪಿಂಚಣಿ, ವೃದ್ಯಾಪ ವೇತನ ಹಾಗೂ ಉಚಿತವಾಗಿ ಪಡೆಯಬಹುದಾದ ಇತರೆ ಸೌಲಭ್ಯಗಳ ಮಾಹಿತಿ ನೀಡಲಾಯಿತು. ಈ ಒಂದು ಕಾರ್ಯಕ್ರಮದಲ್ಲಿ ಆಶಾ ಕಾರ್ಯಕರ್ತೆಯರು ಹಾಗೂ ಫಲಾನುಭವಿಗಳು ಸೇರಿ ಒಟ್ಟು 08 ಜನರು ಭಾಗವಹಿಸಿದರು.



## “ಶ್ರೀ ಮಾತಾ ವಿಶೇಷ ವಿಕಲ ಚೇತನರ ಗುಂಪು ರಚನೆ”

ಹಳ್ಳಿಖೇಡ (ಬಿ) ಗ್ರಾಮದ ಶಿಬಿರದಲ್ಲಿ ತಾಲೂಕು ಮಟ್ಟದ ಗುಂಪು ರಚಿಸಲಾಯಿತು. ಸಂಸ್ಥೆಯ ಶ್ರೀ. ಪ್ರಕಾಶ್ ರವರು ಇದನ್ನು ರಚಿಸಿ ಇದರ ಉದ್ದೇಶವನ್ನು ತಿಳಿಸಿದರು. ಇವರನ್ನು ಉತ್ತೇಜಿಸಿ ಸಂಸ್ಥೆಯು ಇವರಿಗೆ ನೀಡುವ ಸಹಕಾರ ಮತ್ತು ಬೆಂಬಲವನ್ನು ತಿಳಿಸಲಾಯಿತು. ಈ ಸಭೆಯು 3 ತಿಂಗಳಿಗೊಮ್ಮೆ ನಡೆಸಲಾಗುವುದು ಎಂಬ ಮಾಹಿತಿ ನೀಡಿದರು. ಈ ಸಭೆಗೆ ಶ್ರೀ ಮಾತಾ ಎಂದು ನಾಮಕರಣ ಮಾಡಿದರು. ಸಭೆಯಲ್ಲಿ 19 ಜನ ಭಾಗ ವಹಿಸಿದ್ದರು.



## “ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಾನಸಿಕ ಆರೋಗ್ಯ ಶಿಬಿರ”



ಬೀದರ್ ತಾಲೂಕಿನ ಅಂದೂರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಮಾನಸಿಕ ಆರೋಗ್ಯ ಶಿಬಿರ ನಡೆಸಲಾಯಿತು. ಈ ಶಿಬಿರದಲ್ಲಿ ಲಿವ್. ಲವ್. ಲಾಫ್ ಕಾರ್ಯಕ್ರಮದ ಕಾರ್ಯಕತೆಯಾದ ಶ್ರೀಮತಿ ಪ್ರೀತಿ ಯವರು ಭಾಗವಹಿಸಿ ನೋಂದಾವಣೆ ಹಾಗೂ ಮಾತ್ರೆಗಳ ಪರಿಶೀಲನೆ ಮಾಡಲು ಜಿಲ್ಲಾ ಆರೋಗ್ಯ ಅಧಿಕಾರಿಗಳೊಂದಿಗೆ ಸಹಕರಿಸಿದರು. ಹಾಗೂ ಬಂದಂತ ಫಲನುಭವಿಗಳಿಗೆ ಧೂಮಪಾನ ಸೇವನೆಯ ಪರಿಣಾಮಗಳನ್ನು ತಿಳಿಸಿದರು.

## “ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಉಚಿತ ಮಾತ್ರೆಗಳ ವಿತರಣೆ”



ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ (ಬಿ) ನಲ್ಲಿ ಮಾನಸಿಕ ಆರೋಗ್ಯ ಶಿಬಿರ ನಡೆಸಲಾಯಿತು. ಈ ಶಿಬಿರದಲ್ಲಿ ಸಂಸ್ಥೆಯ ಲಿವ್. ಲವ್. ಲಾಫ್ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀ. ಪ್ರಕಾಶ್ ರವರು ಭಾಗವಹಿಸಿದ್ದರು. ಈ ಶಿಬಿರದಲ್ಲಿ ಭಾಗಿಯಾಗಿದ್ದ ಫಲನುಭಾವಿಗಳಿಗೆ ಉಚಿತ ಮಾತ್ರೆಗಳು ದೊರೆಯುವಂತೆ ಮಾಡಿ ಅವರಿಗೆ ಸಂಸ್ಥೆಯ ವತಿಯಿಂದ ಆಪ್ತ ಸಮಾಲೋಚನೆ ಮಾಡಿಸಿದ್ದರು. ಈ ಶಿಬಿರದಲ್ಲಿ 24 ಫಲನುಭವಿಗಳು ಭಾಗಿಯಾಗಿ ಉಪಯೋಗ ಪಡೆದುಕೊಂಡರು.

## “ಮಾಸಿಕ ವೇತನವನ್ನು ಪುನಃ ಆರಂಭ ಕುರಿತು ಜಾಗೃತಿ”



12 ಡಿಸೆಂಬರ್ 202 ರಂದು ಭಾಲ್ಕಿ ತಾಲೂಕಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಉಚಿತ ಮಾನಸಿಕ ಆರೋಗ್ಯ ತಪಾಸಣೆ ನಡೆಸಲಾಗಿ. ಸುಮಾರು 98 ಮಾನಸಿಕ ಅಸ್ವಸ್ಥ ವ್ಯಕ್ತಿಗಳು ಚಿಕಿತ್ಸೆ ಪಡೆದುಕೊಂಡಿದ್ದರು. ಇವರಿಗೆ ಸಂಸ್ಥೆಯ ವತಿಯಿಂದ ಮಾಸಿಕ ವೇತನದ ಅರಿವು ಮೂಡಿಸಿ ಕಾರಣಾಂತರಗಳಿಂದ ಸ್ಥಗಿತಗೊಂಡಿದ ಮಾಸಿಕ ವೇತನವನ್ನು ಪುನಃ ಆರಂಭಿಸಲಾಗಿದೆ.

## “ಮಾನಸಿಕ ಅಸ್ವಸ್ಥರನ್ನು ತಪಾಸಣೆಗೆ ಒಳಪಡಿಸಿ ಉಚಿತ ಔಷಧಿ”



04 ಡಿಸೆಂಬರ್ 2025ರಂದು ಕಮಲನಗರ ತಾಲೂಕಿನ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ತಪಾಸಣೆ ನಡೆಸಲಾಯಿತು. ಸಂಸ್ಥೆ ವತಿಯಿಂದ ನವೆಂಬರ್ ತಿಂಗಳಲ್ಲಿ ಹೊಸದಾಗಿ ಪತ್ತೆ ಹಚ್ಚಲಾದ 7 ಮಾನಸಿಕ ಅಸ್ವಸ್ಥರನ್ನು ತಪಾಸಣೆಗೆ ಒಳಪಡಿಸಿ ಉಚಿತ ಔಷಧಿ ಕೊಡಿಸಲಾಯಿತು. ಹಾಗೆಯೆ ಅವರಿಗೆ ಜಿಲ್ಲಾ ಆರೋಗ್ಯ ಮನೋವೈದ್ಯರೊಂದಿಗೆ ಕರೆಯಮೂಲಕ ಸಂಭಾಷಣೆ ನಡೆಸಿಕೊಡಲಾಯಿತು. ಈ ಶಿಬಿರದಲ್ಲಿ 31 ಜನ ಭಾಗಿಯಾಗಿದರು.

## “ತಾಲೂಕು ಮಟ್ಟದ ಗುಂಪು ರಚನೆ”



ಹಲಸೂರು ಗ್ರಾಮದಲ್ಲಿ ತಾಲೂಕು ಮಟ್ಟದ ಸಭೆ ರಚಿಸಲಾಯಿತು. ಈ ಸಭೆಗೆ ಕಾರ್ಯ ಕ್ರಮದ ವ್ಯವಸ್ಥಾಪಕಿಯಾದ ಸಿಸ್ಟರ್ ಕ್ರಿಸ್ಟಿನಾ ರವರು ಭಾಗಿಯಾಗಿ ಮೊದಲಿಗೆ ಅವರ ಕಷ್ಟಗಳ ಕುರಿತು ಸಂಭಾಶಿಸಿದರು. ನಂತರ ಅವರ ತೊಂದರೆಗಳನ್ನು ಪರಿಹರಿಸಲು ಈ ಗುಂಪನ್ನು ರಚಿಸಲಾಗಿದೆ. ನಾವು ಒಬ್ಬರಾಗಿ ನಿಂತರೇ ಪ್ರಯೋಜನ ಲಭಿಸುವದಿಲ್ಲ ಬದಲಾಗಿ ಗುಂಪಾಗಿ ನಮ್ಮ ಹಕ್ಕು ಗಳನ್ನು ಪಡೆಯಬಹುದು ಎಂದು ತಿಳಿಸಿದರು.

## “ಮಾನಸಿಕ ಆರೋಗ್ಯ ಅರಿವು ಕಾರ್ಯಕ್ರಮ”



ಕಮಲನಗರ ತಾಲೂಕಿನ ಚಂದೂರೀ ಗ್ರಾಮದಲ್ಲಿ ಶ್ರೀಮತಿ ದೀಪಿಕಾರವರು ಗ್ರಾಮ ಪಂಚಾಯತ್ ಸದಸ್ಯರಿಗೆ ಮಾನಸಿಕ ಆರೋಗ್ಯ ಅರಿವು ಕಾರ್ಯಕ್ರಮ ನಡೆಸಿದರು. ಇವರಿಗೆ ಮಾನಸಿಕ ಕಾಯಿಲೆಯ ವಿದಗಳು, ಅದರ ಲಕ್ಷಣಗಳು, ಕೈಗೊಳ್ಳಬೇಕಾದ ಕ್ರಮಗಳ ಮಾಹಿತಿ ನೀಡಲಾಯಿತು. ಇದರ ಜೊತೆಗೆ ಅವರನ್ನು ಪತ್ತೆ ಹಚ್ಚಿ ಅವರನ್ನು ಗುಣಗೊಳಿಸುವಲಿ ಸಂಸ್ಥೆಯ ಪಾತ್ರದ ಕುರಿತು ತಿಳಿಸಲಾಯಿತು. ಅವರಿಗೆ ಇದ್ದಂತಹ ಕೆಲವು ಮೂಢ ನಂಬಿಕೆಗಳನ್ನು ದೂರ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ 09 ಸದಸ್ಯರು ಇದರಲ್ಲಿ ಭಾಗವಹಿಸಿದರು.

## “ಮಾನಸಿಕ ಅಸ್ವಸ್ಥರಿಗೆ ಮಾತ್ರೆಗಳ ಸೌಲಭ್ಯ ಕುರಿತು ಜಾಗೃತಿ ಕಾರ್ಯಕ್ರಮ”



ಲಿವ್. ಲವ್. ಲಾಫ್ ಸಂಯುಕ್ತ ಆಶ್ರಯದಲ್ಲಿ ಹುಲಸೂರು ಗ್ರಾಮದ ಗ್ರಾಮ ಪಂಚಾಯತ್‌ನಲ್ಲಿ ಸಂಸ್ಥೆಯ ವತಿಯಿಂದ ಶ್ರೀಮತಿ ಲಕ್ಷ್ಮಿ ಯವರು ಮಾನಸಿಕ ಆರೋಗ್ಯದ ಜಾಗೃತಿ ಕಾರ್ಯಕ್ರಮವನ್ನು ನಡೆಸಿದರು. ಇದರ ನಿಟ್ಟಿನಲ್ಲಿ ಸಂಸ್ಥೆ ಮಾಡುತ್ತಿರುವ ಸೇವೆ, ಪತ್ತೆ ಹಚ್ಚಲಾದ ಮಾನಸಿಕ ಅಸ್ವಸ್ಥರ ಅಂಕಿಅಂಶ, ಅವರನ್ನು ಚಿಕಿತ್ಸೆಗೆ ಒಳಪಡಿಸುವ ಕ್ರಮ, ಮಾತ್ರೆಗಳ ಸೌಲಭ್ಯ, ಮಾಸಿಕವೇತನ ಇವುಗಳ ಮಾಹಿತಿ ನೀಡಲಾಯಿತು. ಇದರಲ್ಲಿ ಅಧ್ಯಕ್ಷರು, ಅಭಿವೃದ್ಧಿ ಅಧಿಕಾರಿ ಸೇರಿದಂತೆ 19 ಸದಸ್ಯರು ಭಾಗವಹಿಸಿದ್ದರು.

## "ಮಾನಸಿಕ ಅಸ್ವಸ್ಥರ ಆರೈಕೆ ಮಾಡುವ ವಿಧಾನ ಹಾಗೂ ಆರೈಕೆ ದಾರರ ಸಭೆ"



05 ಡಿಸೆಂಬರ್ 2025ರಂದು ಲಿವ್. ಲವ್. ಲಾಫ್ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮತಿ ನಲಂದಾ ರವರು ಭಾಲ್ಕಿ ತಾಲೂಕಿನ ಸಾಯಗಾಂವ ಗ್ರಾಮದಲ್ಲಿ ಆರೈಕೆ ದಾರರ ಸಭೆಯನ್ನು ನಡೆಸಿದರು. ಇವರಿಗೆ ತಮ್ಮ ಅರಿಕೆಯ ಮತ್ತು ಮಾನಸಿಕ ಅಸ್ವಸ್ಥರ ಆರೈಕೆ ಮಾಡುವ ವಿಧಾನ, ಮಾತ್ರೆಗಳನ್ನು ತೆಗೆದು ಕೊಳ್ಳುವ ರೀತಿ, ಮಾಡಾಬೇಕಾದ ದೈಹಿಕ ಚಟುವಟಿಕೆಗಳ ಮಾಹಿತಿ ನೀಡಲಾಯಿತು. ಈ ಸಭೆಯಲ್ಲಿ ತಮ್ಮ ನೋವನ್ನು ಹಂಚಿಕೊಳ್ಳುವ ವೇದಿಕೆ ನೀಡಿದ ಕಾರಣ ಆರೈಕೆ ದಾರರ ಆಸಕ್ತಿ ಹೆಚ್ಚಿಸಲಾಯಿತು. ಈ ಸಭೆಯಲ್ಲಿ 08 ಜನ ಭಾಗವಹಿಸಿದ್ದರು.

## "ಆರೈಕೆ ದಾರರ ಸಭೆ"



ಭಾಲ್ಕಿ ತಾಲೂಕಿನ ಕಾಕನಾಳ ಗ್ರಾಮದಲ್ಲಿ ಕಾರ್ಯಕರ್ತರಾದ ಶ್ರೀ. ಪೀಟರ್ ರವರು ಆರೈಕೆ ದಾರರ ಸಭೆ ನಡೆಸಿದರು. ಈ ಸಭೆಯಲ್ಲಿ ಆರೈಕೆದಾರರು ಸುತ್ತಮುತ್ತ ಎದುರಿಸುತ್ತಿರುವ ಸವಾಲುಗಳ ಕುರಿತು ಚರ್ಚಿಸಲಾಯಿತು. ನೆರೆದಿದ್ದ ಆಶಾ ಕಾರ್ಯಕರ್ತೆಯರು ಸಭೆಯನ್ನು ಉದ್ದೇಶಿಸಿ ಜಿಲ್ಲಾ ಆರೋಗ್ಯ ಕೇಂದ್ರದಿಂದ ಪಡೆಯಬಹುದಾದ ಸವಲತ್ತುಗಳ ಮಾಹಿತಿ ನೀಡಿದರು. ಈ ಸಭೆಯಲ್ಲಿ ಫಲನುಭವಿಗಳು ಮತ್ತು ಆಶಾ ಕಾರ್ಯಕರ್ತೆಯರು ಸೇರಿ 09 ಜನ ಭಾಗವಹಿಸಿದ್ದರು.

# "ಸೇವಾ ಸಂಗಮ ಗುಲ್ಬರ್ಗಾ ಕಾರ್ಯಕ್ರಮಗಳು"

## "ಮಕ್ಕಳಿಗೆ ಸರಕಾರದಿಂದ ವಿವಿಧ ಸೌಲಭ್ಯಗಳು"



20 ಡಿಸೆಂಬರ್ 2025ರಂದು ಸೇವಾಸಂಗಮ ಸಂಸ್ಥೆ ಹಾಗೂ ಅಜೀಮ್‌ಂ ಪ್ರೇಮಜಿ ಫೌಂಡೇಶನ ಸಂಯುಕ್ತ ಆಶ್ರಯದಲ್ಲಿ ಕಲ್ಬುರ್ಗಿ ನಗರ ಪ್ರದೇಶದಲ್ಲಿರುವ ಮದರ ತೆರಸಾ ಹಾಲಿನಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಅಡಿಯಲ್ಲಿ 0 ದಿಂದ 8 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಟಿತ ವಿರುವ ಮಕ್ಕಳನ್ನು ಹೇಗೆ ಗುರುತಿಸಬೇಕು. ಗುರ್ತಿಸಿದ ನಂತರ ಮಕ್ಕಳಿಗೆ ವಿವಿಧ ಚಟುವಟಿಕೆ ಮಾಡುವದರ ಮುಖಾಂತರ ಅವರಲ್ಲಿರುವ ನ್ಯೂನ್ಯತೆಯ ತೀವ್ರತೆಯನ್ನು ಹಂತಹಂತವಾಗಿ ಕಡಿಮೆ ಮಾಡಬಹುದು ಇಂತಹ ಮಕ್ಕಳಿಗೆ ಸರಕಾರದಿಂದ ವಿವಿಧ ಸೌಲಭ್ಯಗಳನ್ನು ದೊರೆಯುತ್ತವೆ ಎಂದು ಶ್ರೀಮತಿ ಶಿವಕಾಂತ ಅವರು ಮಾಹಿತಿ ತಿಳಿಸಿದರು. ಮತ್ತು ಸೇವಾಸಂಗಮ ಸಂಸ್ಥೆಯ ಸಹ ನಿರ್ದೇಶಕರಾದ ಫಾದಡಿ ದೀಪಕ ಮತ್ತು ಕಾರ್ಯಕರ್ತರಾದ ಲಕ್ಷ್ಮಿ ಮಂಜುಳಾ ಹಾಗೂ ವಿವಿಧ ಗ್ರಾಮಗಳಿಂದ ಮತ್ತು ವಿವಿಧ ನಗರ ಪ್ರದೇಶಗಳಿಂದ ಒಟ್ಟು 120 ಜನ ಮಹಿಳೆಯರು ಭಾಗವಹಿಸಿದರು.

## "ಬೆಳವಣಿಗೆ ಕುಂಠಿತವಿರುವ ಮಕ್ಕಳ ಕುರಿತು ಜಾಗೃತಿ"



17 ಡಿಸೆಂಬರ್ 2025ರಂದು ಸೇವಾಸಂಗಮ ಸಂಸ್ಥೆ ಮತ್ತು ಅಜೀಮ್‌ಂ ಪ್ರೇಮಜಿ ಅವರ ಸಂಯೋಗದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಅಡಿಯಲ್ಲಿ ಬೆಳವಣಿಗೆ ಕುಂಠಿತವಿರುವ ಕುರಿತು ಕಲ್ಬುರ್ಗಿ ನಗರದ ಸಂತೋಷ್ಕಾ ಲೋನಿ ಏರಿಯಾದ ಎರಡನೆ ಅಂಗನವಾಡಿ ಕೇಂದ್ರದಲ್ಲಿ ಅರಿವಿನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತವಿರುವ ಮಕ್ಕಳನ್ನು ಹೇಗೆ ಗುರಿತಿಸಬೇಕು ಗುರುತಿಸಿದ ಮಕ್ಕಳನ್ನು ನಮ್ಮ ಸಂಸ್ಥೆಯ ವತಿಯಿಂದ ಯಾವರೀತಿ ಚಟುವಟಿಕೆಗಳು ನೀಡುತ್ತೇವೆ ಮಗುವಿನಲ್ಲಿ ಯಾವರೀತಿ ಬದಲಾವಣೆ ಆಗುತ್ತದೆ ಮತ್ತು ಸರ್ಕಾರದ ಸೌಲಭ್ಯಗಳು ಕುರಿತು ಸಂಪೂರ್ಣ ಮಾಹಿತಿಯನ್ನು ಶ್ರೀಮತಿ ವಿಜಯಲಕ್ಷ್ಮಿ ಆಶಾಕಾರ್ಯಕರ್ತೆಯವರು 11 ಜನ ಮಹಿಳೆಯರಿಗೆ ಮಾಹಿತಿ ನೀಡಿದರು. ಅಂಗನವಾಡಿ ಕಾರ್ಯಕರ್ತೆ ಮತ್ತು ಸಹಾಯಕಿ ಇದ್ದರು.

## "ಅಂಗನವಾಡಿಯಲ್ಲಿ ಮಕ್ಕಳಿಗೆ ಬೇಬಿಸ್ಕ್ರೀನಿಂಗ್"



18 ಡಿಸೆಂಬರ್ 2025ರಂದ ಸೇವಾಸಂಗಮ ಸಂಸ್ಥೆ ಮತ್ತು ಅಜೀಮ್‌ಂ ಪ್ರೇಮಜಿ ಫೌಂಡೇಶನ್ ಸಂಯೋಗದಲ್ಲಿ ಕಲ್ಬುರ್ಗಿ ತಾಲೂಕಿನ ಕೊಲ್ಲೂರು ಗ್ರಾಮದ ಅಂಗನವಾಡಿಯಲ್ಲಿ ಮಕ್ಕಳಿಗೆ ಬೇಬಿಸ್ಕ್ರೀನಿಂಗ್ ಮಾಡಲಾಯಿತು. ಬೆಳವಣಿಗೆಯಲ್ಲಿ ಕೊಂಟಿತ ಹೊಂದಿರುವ ಮಗುವಿಗೆ ಎತ್ತರ ತೂಕ ಚೆಕ್ ಮಾಡುವುದರ ಮೂಲಕ ಕಂಡು ಹಿಡಿಯುವುದರ ಸಲುವಾಗಿ ಒಟ್ಟು 15 ಮಕ್ಕಳಿಗೆ ಎತ್ತರ ತೂಕ ತಲೆ ಸುತ್ತಳತೆಅನ್ನು ಲಕ್ಷ್ಮಿಯವರು ಮಕ್ಕಳಿಗೆ ಮಾಡಿದರು.

## “ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ತರಬೇತಿ”



06 ಡಿಸೆಂಬರ್ 2025ರಂದು ಕಲ್ಬುರ್ಗಿ ಜಿಲ್ಲೆಯಲ್ಲಿ ಬರುವ ಸೀತನೂರ ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ. ಸೇವಾಸಂಗಮ ಸಂಸ್ಥೆ ಮತ್ತು ಅಜೀಮ್‌ಂ ಪ್ರೇಮಜಿ ಫೌಂಡೇಶ ಇವರ ಸಂಯುಕ್ತ ಆಶ್ರಯದಲ್ಲಿ, ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ತರಬೇತಿಯ ಕುರಿತು 5 ಮತ್ತು 6 ತರಗತಿ ವಿದ್ಯಾರ್ಥಿಗಳಿಗೆ ಬೆಳವಣಿಗೆಯಲ್ಲಿ ಕುಂಠಿತ ಇರುವ ಮಕ್ಕಳು ಯಾವಯಾವ ರೀತಿಯಾಗಿ ಇರುವರು ಎಂದರೆ ಮಗು ಹುಟ್ಟಿದ್ದಕ್ಷಣ ಅಳಬೇಕು ಇಲ್ಲವಾದರೆ ಮಗುವಿನ ಬೆಳವಣಿಗೆಯಲ್ಲಿ ುಂಟಿತಗೊಳ್ಳುವುದು, ಮೂರು ತಿಂಗಳಲ್ಲಿ ಮಗುವಿನ ಕತ್ತು ನಿಲ್ಲಬೇಕು. 9 ತಿಂಗಳಿಗೆ ಮಗು ಕುಳಿತುಕೊಳ್ಳಬೇಕು ಮತ್ತು ಅಂಬೆಗಾಲು ಹಾಕಬೇಕು ಒಂದು ವರ್ಷದಲ್ಲಿ ಮಗು ಯಾರು ಸಹಾಯವಿಲ್ಲದೆ ನಡೆಯುವುದನ್ನು ಕಲಿಯಬೇಕು. ಎರಡು ವರ್ಷದಲ್ಲಿ ಮಗು ಸಂಪೂರ್ಣವಾಗಿ ಮನೆಯವರ ಹೆಸರುಗಳನ್ನು ಹೇಳಬೇಕು ಮತ್ತು ಮನೆಯ ವಾತಾವರಣಕ್ಕೆ ಮಗು ಹೊಂದಿಕೊಳ್ಳಬೇಕು, ಮೂರು ವರ್ಷಕ್ಕೆ ಮಗು ಅಂಗನವಾಡಿ ಕೇಂದ್ರಕ್ಕೆ ಹೋಗಬೇಕು ಎಲ್ಲ ಮಕ್ಕಳ ಜೊತೆ ಸಾಮಾಜಿಕವಾಗಿ ಹೊಂದಿಕೊಳ್ಳಬೇಕು. ಆರು ವರ್ಷದಲ್ಲಿ ಮಗು ಶಾಲೆಗೆ ಹೋಗಿ ಅಕ್ಷರ ಜ್ಞಾನ ಪಡೆದುಕೊಳ್ಳಬೇಕು. ಈ ಎಲ್ಲಾ ಮೇಲಿನ ಅಂಶಗಳು ಒಂದು ವೇಳೆ ಮಗುವಿನಲ್ಲಿ ಕಂಡುಬಾರದೆ ಹೋದರೆ ಮಗುವಿನ ಬೆಳವಣಿಗೆ ಹಂತದಲ್ಲಿ ಕುಂಟಿತಗೊಂಡಿದೆ ಎಂದು ತಿಳಿದುಕೊಳ್ಳಬೇಕು. ಎಂದು ಸೇವಾಸಂಘ ಸಂಸ್ಥೆಯ ಕಾರ್ಯಕರ್ತೆಯಾದ ಶ್ರೀಮತಿ ದಾಕ್ಷಾಯಣಿಯವರು ವಿದ್ಯಾರ್ಥಿಗಳಿಗೆ ಬೆಳವಣಿಗೆಯಲ್ಲಿ ಕುಂಟಿತ ಇರುವ ಮಕ್ಕಳ ಬಗ್ಗೆ ಮಾಹಿತಿ ನೀಡಿದ್ದರು. ಈ ಒಂದು ಕಾರ್ಯಕ್ರಮದಲ್ಲಿ ಒಟ್ಟು 15 ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## “ವಿಶ್ವ ಅಂಗವಿಕಲರ ದಿನಾಚರಣೆ ಕಾರ್ಯಕ್ರಮ”



16 ಡಿಸೆಂಬರ್ 2025ರಂದು ಕಲ್ಬುರ್ಗಿ ನಗರದ ಚೈತನ ಕೇಂದ್ರದಲ್ಲಿ ಶೀಘ್ರ ಪತ್ತೆಹಚ್ಚಿವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ವತಿಯಿಂದ ವಿಶ್ವ ಅಂಗವಿಕಲರ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಪಾಲಕರನ್ನು ಉದ್ದೇಶಿಸಿ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ರವರು ಇಂತಹ ಮಕ್ಕಳು ಹುಟ್ಟಿದ್ದು ಶಾಪವಲ್ಲ ಬದಲಿಗೆನ ವರವೆಂದು ಭಾವಿಸಿ ಇಂಥ ಮಕ್ಕಳ ಸೇವೆ ದೇವರ ಸೇವೆ ನಮ್ಮ ಸಂಸ್ಥೆವತಿಯಿಂದ ಇಂತಹ ಮಕ್ಕಳಿಗೆ ಸ್ಟಿಮುಲೆಸನ್ ಆಕ್ಟಿವಿಟಿ ಪಡೆದುಕೊಂಡು ಅನೇಕ ಮಕ್ಕಳು ಬದಲಾವಣೆ ಹೊಂದಿರುವರು ಅನೇಕ ಮಕ್ಕಳಿಗೆ ಸಾಧನಾ ಸಲಕರಣೆಗಳು ನೀಡಲಾಗಿದೆ ಅದೇರೀತಿಯಾಗಿ ಬೆಳವಣಿಗೆಯಲ್ಲಿ ಕುಂಟಿತವಿರುವ ಮಗುವಿಗೆ ನ್ಯೂಟ್ರಿಷನ್ ನೀಡಲಾಗಿದೆ ಇನ್ನುಮುಂದೆ ಪೋಷಕರೇ ವೆಲೆಂಟರಗಳಾಗಿ ನೀವು ನಮ್ಮಜೊತೆ ಕೈಜೋಡಿಸಬೇಕು ಯಾವಾಗಲೂ ನಮ್ಮ ಸೇವೆಯೇ ತೆಗೆದುಕೊಳ್ಳಲು ಮತ್ತು ಪ್ರತಿಯೊಂದು ಕಾರ್ಯಕ್ರಮದಲ್ಲಿ ನೀವು ಸಹಕರಿಸಬೇಕು ನೀವೆಲ್ಲರೂ ಒಗ್ಗಟ್ಟಾಗಿ ಇದ್ದರೆ ಸರಕಾರದಿಂದ ಬರುವ ಸೌಲಭ್ಯಗಳು ಸರಳವಾಗಿ ದೊರಕುವದು ಇನ್ನು ಮುಂತಾದ ವಿಷಯಗಳು ಪೋಷಕರಿಗೆ ಮಾಹಿತಿ ನೀಡಿದರು. ಪ್ರಾಜೆಕ್ಟ ಸಂಯೋಜಕಿಯಾದ ಶ್ರೀಮತಿ ಶ್ವೇತಾ ಕುಲಕರ್ಣಿ ಅವರು ಯೋಜನೆ ಕುರಿತು ಪ್ರಾಸ್ತವಿಕ ನುಡಿಗಳನ್ನು ಹೇಳಿದರು. ಆರ್ಪಿಡಿ ಗೌರವಾ ಅಧ್ಯಕ್ಷ ಶ್ರೀಮತಿ ಗಾಯತ್ರಿಯವರು ಈ ಕಾರ್ಯಕ್ರಮವನ್ನು ಕುರಿತು ಬೆಳವಣಿಗೆಯಲ್ಲಿ ಕುಂಟಿತ ಇರುವ ಮಕ್ಕಳು ಇಂಥ ಮಕ್ಕಳ ಕಷ್ಟ ಏನು ಎನ್ನುವುದು ತಾಯಿಯಾದವಳಿಗೆ ಮಾತ್ರ ಗೊತ್ತಿರುವುದು, ಇಂಥ ಮಕ್ಕಳನ್ನು ಅತಿಯಾದ ಪ್ರೀತಿ ಕಾಳಜಿ ವಹಿಸಿಕೊಂಡು ಬೆಳೆಸಬೇಕು ಅಂತ ಮಕ್ಕಳಿಗೆಕೂಡ ಒಳ್ಳೆ ತರಬೇತಿ ಕೊಟ್ಟರೆ ಸಮಾಜದಲ್ಲಿ ಇವರ ಸಾಧನೆಯು ಅಮೋಘವಾಗಿರುವದು ಎಂದು ತಿಳಿಸಿದರು. ಮತ್ತು ಪೋಷಕರ ಇಂದಿನ ಅಧ್ಯಕ್ಷರು ಶ್ರೀಮತಿ ಕಾವೇರಿ ಬೆಳವಣಿಗೆಯಲ್ಲಿ ಕುಂಟಿತ ಇರುವ ಮಕ್ಕಳ ಬಗ್ಗೆ ಇಂತ ಮಕ್ಕಳು ನಮ್ಮ ಶಾಪ ಎಂದು ಅಥವಾ ನಮ್ಮ ಕರ್ಮವೆಂದು ಕೀಳರಿಮೆ ಭಾವನೆಯಿಂದ ಯಾವುದೇ ತಂದೆ ತಾಯಿ ಪೋಷಕರು ನೊಂದುಕೊಳ್ಳಬಾರದು ಇಂತಹ ಮಕ್ಕಳ ಸೇವೆ ಮಾಡುವದು ನಮ್ಮ ಪುಣ್ಯವೆಂದು ಭಾವಿಸಿ ಸೇವೆಯನ್ನು ಮಾಡಬೇಕು ಈ ರೀತಿಯಾಗಿ ತಮ್ಮ ಅನಿಸಿಕೆಗಳನ್ನು ಈ ಕಾರ್ಯಕ್ರಮದಲ್ಲಿ ವ್ಯಕ್ತಪಡಿಸಿದರು. ಇದರಲ್ಲಿ ಈ ಒಂದು ಕಾರ್ಯಕ್ರಮದಲ್ಲಿ ಸೆಂಟ್ಮೇರಿ ಶಾಲೆಯ ಮುಖ್ಯೋಪಾಧ್ಯರಾದ ಸಿಸ್ಟರ್ ರೋಸ್ಲಿನ್, ವಿಕಲ ಚೇತನರ ಸಂಘದ ಅಧ್ಯಕ್ಷರಾದ ಮೈಬೂಬ ಸೈಯದ ವಿಕಲಚೇತನರ 45 ಪೋಷಕರು ಹಾಗೂ ಮಕ್ಕಳು ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು. ಶ್ರೀಮತಿ ದಾಕ್ಷಾಯಿಣಿ ಕಾರ್ಯಕ್ರಮವನ್ನು ನಿರೂಪಿಸಿದರ ಶ್ರೀ ರಾಜಕುಮಾರ ಸ್ವಾಗತಿಸಿದರು ಕುಮಾರಿ ಲಕ್ಷ್ಮಿ ವಂದಿಸಿದರು.

## “ಬೆಳವಣಿಗೆ ಕುಂಟಿತ ಇರುವ ಮಕ್ಕಳಿಗೆ ಸಾಧನ ಸಲಕರಣೆ ವಿತರಣೆ”



ಸೇವಾಸಂಗಮ ಸಂಸ್ಥೆ ಹಾಗೂ ಅಜೀಮ್‌ಂ ಪ್ರೇಮಜಿ ಫೌಂಡೇಶನ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಅರಭಿಕ ಶಿಕ್ಷಣ ಅಡಿಯಲ್ಲಿ ಬೆಳವಣಿಗೆ ಕುಂಟಿತ ಇರುವ ಮಕ್ಕಳಿಗೆ ಸಾಧನ ಸಲಕರಣೆ ವಿತರಣೆ ಮಾಡಲಾಗಿತ್ತು. ಸೇವಾಸಂಗಮ ಸಂಸ್ಥೆಯ ಕಾರ್ಯಕರ್ತೆಯಾದ ಕುಮಾರಿ ಅನಿತಾ ಅವರು ಮಕ್ಕಳಿಗೆ ಚಟುವಟಿಕೆ ಮಾಡಿಸುತ್ತಿದ್ದಾರೆ. ನೀವುಸಹ ಪಾಲಕರು ಅವರ ಜೊತೆ ಕೈಜೋಡಿಸಿ ಮಕ್ಕಳಿಗೆ ಸತತವಾಗಿ ಚಟುವಟಿಕೆ ಮಾಡಿಸಿ ಮಕ್ಕಳಲ್ಲಿ ಬದಲಾವಣೆ ತರುವುದರ ಮೂಲಕ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದಾಗಿದೆ ಎಂದು ತಿಳಿಸಿದರು. ಸೇವಾಸಂಗಮ ಸಂಸ್ಥೆ ಬೆಳವಣಿಗೆಯಲ್ಲಿ ಕುಂಟಿತವಿರುವ ಮಕ್ಕಳ ಸುಮಾರು ವರ್ಷಗಳಗಳಿಂದ ಕಾರ್ಯ ನಿರ್ವಹಿಸುತ್ತಿದ್ದು ಈ ಮಕ್ಕಳ ಬೆಳವಣಿಗೆಗಾಗಿ ಹಾಗೂ ಅವರಕೂಡ ಸಮಾಜದಲಿ ಬೇರೆ ಮಕ್ಕಳಂತೆ ಮುಖ್ಯವಾಹಿನಿಗೆ ತರುವಂತೆ ನೋಡಿಕೊಳ್ಳುವುದು ಹಾಗೂ ಇದರಲ್ಲಿ ಪಾಲಕರ ಪಾತ್ರವು ಬಹು ಮಹತ್ವದು ಹಾಗೂ ಸಾಧನ ಸಲಕರಣೆಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.ಈ ಸಾಮಾಗ್ರಿಗಳು ಉಪಯೊಗಿಸುತ್ತಾ ದಿನನಿತ್ಯ ಮನೆಯಲ್ಲಿ ಮಗುವಿಗೆ ಸಾಧನ ಸಲಕರಣೆ ಬಳಸಿಕೊಂಡು ಚಟುವಟಿಕೆ ಮಾಡುತ್ತಿದರೆ ಅದರಿಂದ ಮಗುವಿಗೆ ಉಪಯೋಗ ಆಗಿದೆ ಎಂದು ಸಂಸ್ಥೆಗೆ ಅಭಿನಂದನೆಗಳು ಸಲ್ಲಿಸಿದ್ದಾರೆ.

## “ರಂಗಮಂದಿರ ಭವನದಲ್ಲಿ ಮಕ್ಕಳ ಸಂಸ್ಕೃತಿಕ ಕಾರ್ಯಕ್ರಮ”



03 ಡಿಸೆಂಬರ್ 2025ರಂದು ವಿಶ್ವ ಅಂಗವಿಕಲರ ದಿನಾಚರಣೆ ಕಲ್ಬುರ್ಗಿ ನಗರದ ಪಂಡಿತ ರಂಗಮಂದಿರ ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಲ್ಬುರ್ಗಿ ಜಿಲ್ಲೆಯ ಜಿಲ್ಲಾಧಿಕಾರಿಯಾದ ಫೋಜಿಯಾತರನುಮ ಕಾರ್ಯಕ್ರಮವನ್ನು ಉದ್ದೇಶಿಸಿ ಮಕ್ಕಳ ಸಂಸ್ಕೃತಿಕ ಕಾರ್ಯಕ್ರಮವನ್ನು ವೀಕ್ಷಿಸಿ ಪ್ರತಿಭೆ ಎನ್ನುವುದು ಎಲ್ಲರಲ್ಲಿಯೂ ಇರುವದು. ಸಿಕ್ಕಾ ಅವಕಾಶಗಳನ್ನು ಬಳಸಿಕೊಂಡು ಪ್ರತಿಭೆಯನ್ನು ಹೊರಹಾಕಬೇಕು. ಇಂಥ ಮಕ್ಕಳ ಆಧಾರ ಕಾರ್ಡ್ ಅಂದರೆ ಕೇಂದ್ರದಲ್ಲಿ ಮಾಡಿಸಿಕೊಳ್ಳಬಹುದು ಮತ್ತು ಮನೆಮನೆಗೆ ಬಂದು ಬಯೋಮೆಟ್ರಿಕನಲ್ಲಿ ಸೇವೆ ಒದಗಿಸಲಾಗುವುದು. ಎಂದು ಮಾಹಿತಿ ನೀಡಿದರು. ಸೇವಾಸಂಗಮ ಸಂಸ್ಥೆಯ ಕಾರ್ಯಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಶೀಘ್ರ ಪತ್ತೆಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ ಐದು ಜನ ತಾಯಂದಿರನ್ನು ಉತ್ತಮ ಆರೈಕೆದಾರರು ಪ್ರಮಾಣ ಪತ್ರ ಮತ್ತು ಶಾಲುವದಿಸಿ ಜಿಲ್ಲಾ ಹಿರಿಯ ನಾಗರಿಕರ ವಿಕಲ ಚೇತನರ ಸಬಲೀಕರಣ ಇಲಾಖೆಯಿಂದ ಸನ್ಮಾನಿಸಿದರು. ಈ ಕಾರ್ಯಕ್ರಮದಲ್ಲಿ ಸೇವಾಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಮತ್ತು ಸಿಬ್ಬಂದಿ ವರ್ಗದವರು ಹಾಗೂ 225 ಭಾಗವಹಿಸಿದ್ದರು.

## “ಮಕ್ಕಳ ಮನೆ (ಕ್ರೇಚ್) ಕಾರ್ಯಕ್ರಮ)

## “ಕರ್ನಾಟಕದಲ್ಲಿ ಮೊದಲು ಮಕ್ಕಳ ಮನೆ ಉದ್ಘಾಟನೆ ಚಾಲನೆ”



ಕಲಬುರಗಿ: ಯಡ್ರಾಮಿ ತಾಲೂಕಿನ ಇಜೇರಿ ಗ್ರಾಮದಲ್ಲಿ ಸೇವಾಸಂಗಮ ಸಂಸ್ಥೆ, ಕಲಬುರಗಿ, ಅಜೀಂ ಪ್ರೇಮಜೀ ಫೌಂಡೇಶನ್ ಸಹಾಯದಿಂದ ಮಕ್ಕಳ ಮನೆ ಕಾರ್ಯಕ್ರಮ ಉದ್ಘಾಟಿಸಲಾಯಿತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಡಾ.ಅಜಯ್ಸಿಂಗ್, ಅಧ್ಯಕ್ಷರು – ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ ಹಾಗೂ ಶಾಸಕ, ಜೇವರ್ಗಿ ಮತಕ್ಷೇತ್ರ, ಅವರು, ಹಿಂದುಳಿದ ಪ್ರದೇಶಗಳಲ್ಲಿ ಕೂಲಿ ಕಾರ್ಮಿಕರ ತಾಯಂದಿರಿಗೆ ಈ ಮಕ್ಕಳ ಮನೆಗಳು ಅತ್ಯಂತ ಉಪಯುಕ್ತವಾಗಿವೆ. ಇದರಿಂದ ತಾಯಂದಿರಿಗೆ ಕೆಲಸಕ್ಕೆ ಹೋಗುವ ಅವಕಾಶ ದೊರೆಯಲಿದ್ದು, ಜೊತೆಗೆ ಮಕ್ಕಳ ಬೆಳವಣಿಗೆ ಮತ್ತು ಪೌಷ್ಟಿಕತೆಯೂ ಉತ್ತಮವಾಗಲಿದೆ ಎಂದು ಹೇಳಿದರು. ಈ ಕೇಂದ್ರಗಳು ಅಜೀಂ ಪ್ರೇಮಿಜಿ ಫೌಂಡೇಶನ್ ಸಂಯೋಗದಲ್ಲಿ ನಡೆಯುತ್ತಿರುವುದು ನಮಗೆ ಹೆಮ್ಮೆಯ ವಿಷಯವಾಗಿದ್ದು. ಮುಂದಿನ ದಿನಗಳಲ್ಲಿ 145 ಗ್ರಾಮಗಳಲ್ಲಿ ಈ ಯೋಜನೆಗೆ ಧರ್ಮಸಿಂಗ್ ಫೌಂಡೇಶನ್ ಮುಲಕ ಸಂಪೂರ್ಣ ಸಹಕಾರ ನೀಡಲಾಗುವುದು ಎಂದು ತಿಳಿಸಿದರು. ಮಕ್ಕಳ ಮನೆಗಳ



ಮಹತ್ವದ ಬಗ್ಗೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ಗಮನಕ್ಕೂ ತರುವುದಾಗಿ ಗ್ರಾಮಸ್ಥರಿಗೆ ಭರವಸೆ ನೀಡಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಡಾ. ರುದ್ರೇಶ ಅಜೀಂ ಪ್ರೇಮಜಿ ಫೌಂಡೇಶನ್, ಕರ್ನಾಟಕ ಅವರು ಮಾತನಾಡಿ, ಸೇವಾಸಂಗಮ ಸಂಸ್ಥೆಯ ಕಾರ್ಯ ಶ್ಲಾಘನೀಯವಾಗಿದ್ದು. ಕರ್ನಾಟಕದಲ್ಲಿ ಮೊದಲ ಮಕ್ಕಳ ಮನೆ ಯಡ್ರಾಮಿ ತಾಲ್ಲೂಕಿನ ಇಜೇರಿ ಗ್ರಾಮದಲ್ಲಿ ಆರಂಭವಾಗಿರುವುದು ಸಂತಸದ ವಿಷಯ ಎಂದರು. ಇದು ಸರ್ಕಾರದ ಹಣವಲ್ಲ. ಅಜೀಂ ಪ್ರೇಮ್‌ಜೀ ಫೌಂಡೇಶನ್ ನೀಡುತ್ತಿರುವ ಸಹಕಾರವಾಗಿದ್ದು. ಇವರ ಗುರಿ ಆರೋಗ್ಯ, ಶಿಕ್ಷಣ ಮತ್ತು ಗ್ರಾಮೀಣ ಜನರ ಜೀವನ ಮಟ್ಟವನ್ನು ಸುಧಾರಿಸುವುದಾಗಿದೆ. ಮಕ್ಕಳ ಜೀವನದ ಮೊದಲ ಸಾವಿರ ದಿನಗಳು ಅತ್ಯಂತ ಮಹತ್ವದ್ದಾಗಿದ್ದು. ಈ ಅವಧಿಯಲ್ಲಿ ಪೌಷ್ಟಿಕ ಆಹಾರ, ಆರೈಕೆ, ಪಾಲನೆ ಮತ್ತು ಪ್ರೋತ್ಸಾಹ ಮಕ್ಕಳಿಗೆ ಸಿಗಬೇಕು ಎಂದು ತಿಳಿಸಿದರು. ದೇಶಾದ್ಯಂತ 25 ಸಾವಿರ ಮಕ್ಕಳ ಮನೆಗಳನ್ನು ಆರಂಭಿಸುವುದು ನಮ್ಮ ಗುರಿಯಾಗಿದೆ ಎಂದು ಹೇಳಿದರು. ಸೇವಾಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ್ ಅವರು ಪ್ರಸ್ತಾವಿಕ ಭಾಷಣದಲ್ಲಿ ಮಾತನಾಡಿ ಗ್ರಾಮೀಣ ಪ್ರದೇಶದ 7 ತಿಂಗಳಿನಿಂದ 3 ವರ್ಷದೊಳಗಿನ ಎಲ್ಲಾ ಮಕ್ಕಳನ್ನು ಮಕ್ಕಳ ಮನೆಗೆ ಸೇರಿಸುವುದು. ಪೂರಕ ಆಹಾರ, ಬಾಲ್ಯ ಅಭಿವೃದ್ಧಿ ಹಾಗೂ ಸರ್ಕಾರಿ ಯೋಜನೆಗಳಿಗೆ ಸಂಪರ್ಕ ಕಲ್ಪಿಸುವುದು ಈ ಯೋಜನೆಯ ಉದ್ದೇಶವಾಗಿದೆ ಎಂದು ತಿಳಿಸಿದರು. ಬೆಳವಣಿಗೆ ಕುಂಠಿತ, ಕಡಿಮೆ ತೂಕ ಹಾಗೂ ಕ್ಷೀಣಿಸಿದ ಮಕ್ಕಳನ್ನು ಗುರುತಿಸಿ, ಆರೋಗ್ಯ ಸೌಲಭ್ಯಗಳಿಗೆ ನೋಂದಾಯಿಸಿ ನಿರಂತರ ಅನುಸರಣೆ ಮಾಡಲಾಗುವುದು ಎಂದರು. ಕಾರ್ಯಕ್ರಮವನ್ನು ಕು. ಶಂಕುತಲಾ ಅವರು ಸ್ವಾಗತಿಸಿ, ಶ್ರೀ ಗೀತಾಅವರು ನಿರೂಪಣೆ ಮಾಡಿದರು ಹಾಗೂ ರಾಗವೇಂದ್ರ ಅವರು ವಂದನಾರ್ಪಣೆ ಸಲ್ಲಿಸಿದರು. ಕಾರ್ಯಕ್ರಮದಲ್ಲಿ ಪಾಲಕರು, ಮಕ್ಕಳು ಹಾಗೂ ಗ್ರಾಮಸ್ಥರು ಭಾಗವಹಿಸಿದ್ದರು.



## “ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಭೇಟಿ ಮಕ್ಕಳ ಮನೆ ಕಾರ್ಯಕ್ರಮ”



28 ಡಿಸೆಂಬರ್ 2025ರಂದು ಯಡ್ರಾಮಿ ತಾಲೂಕಿನ ಆಲೂರ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಭೇಟಿ ನೀಡಿ. ಮುಂಬರುವ ದಿನಗಳಲ್ಲಿ ಮಕ್ಕಳ ಮನೆ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿ ಇಲ್ಲಿ ಪ್ರಸ್ತುತವಾಗಿ ಒಂದು ಮಕ್ಕಳ ಮನೆಯನ್ನು ಉದ್ಘಾಟನೆ ಮಾಡುವ ಕುರಿತು ಸರ್ಕಾರದ ಬಳಕೆ ಆಗದಂತ ಕಟ್ಟಡಗಳನ್ನು ತಾವು ಆಲೂರ ಗ್ರಾಮದ ಏಳು ತಿಂಗಳಿಂದ ಮೂರು ವರ್ಷದ ಒಳಗಿನ ಮಕ್ಕಳಿಗೆ ಅನುವಾಗುವುದು. ಮಕ್ಕಳ ಮನೆಗೆ ಬಳಕೆ ಮಾಡಲು ನೀಡಬೇಕೆಂದು ಅಜೀಂ ಪ್ರೇಮ್‌ಜೀ ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳಾದ ಶ್ರೀಯುತ ಶರಣು ರವರು ಗ್ರಾಮ ಅಭಿವೃದ್ಧಿ ಅಧಿಕಾರಿಗಳಿಗೆ ಮಾಹಿತಿಯನ್ನು ತಿಳಿಸಿದರು. ಗ್ರಾಮ ಪಂಚಾಯತಿಯಿಂದ ಏನೆಲ್ಲ ಸೌಲಭ್ಯ ಸಿಗಬೇಕಾಗಿದ್ದು ನಾನು ಸಹಾಯ ಮಾಡ್ತೀನಿ ಎಂದು ಹೇಳಿದರು.

## “ಮಕ್ಕಳ ಮನೆ ಕಾರ್ಯಕ್ರಮ”



31 ಡಿಸೆಂಬರ್ 2025ರಂದು ಯಡ್ರಾಮಿ ತಾಲೂಕಿನ ಇಜೇರಿ ಗ್ರಾಮದಲ್ಲಿ ಅಜೀಮ್ಪ್ರೇಮ್ಜೀ ಸಂಸ್ಥೆಯ ಮಕ್ಕಳ ಮನೆ ಕಾರ್ಯಕ್ರಮದ ರಾಜ್ಯ ಸಂಯೋಜಕರಾದ ಶ್ರೀಯುತ ಗುರುರಾಜ್ ರವರು ಮಕ್ಕಳ ಮನೆ ಕಾರ್ಯಕ್ರಮದ ಸಿಬ್ಬಂದಿ ವರ್ಗದವರಿಗೆ ಹಳೆ ಗ್ರಾಮ ಪಂಚಾಯತಿಯಲ್ಲಿ ಮಕ್ಕಳಿಗೆ ಎತ್ತರ ಮತ್ತು ತೂಕ ಹೇಗೆ ತಪಸಣೆ ಮಾಡುವುದು ಮತ್ತು ಮಕ್ಕಳ ನೋಂದಣಿ ಮಾಡುವ ಕುರಿತು ಸಹವಿಸ್ತರವಾಗಿ ಸಿಬ್ಬಂದಿ ವರ್ಗದವರಿಗೆ ಮಾಹಿತಿಯನ್ನು ಡೆಮೋ ಮಾಡುವಮೂಲಕ ತಿಳಿಸಿದರು.

## “ಏಳು ತಿಂಗಳಿಂದ ಮೂರು ವರ್ಷದ ಒಳಗಿನ ಮಕ್ಕಳ ಮನೆ”



ಇಜೇರಿ ಗ್ರಾಮದಲ್ಲಿ ಇರುವಂತ ಮಕ್ಕಳ ಮನೆಯ ರಿಬ್ಬಿನ್ ಕಟ್ ಮಾಡುವ ಮೂಲಕ ಉದ್ಘಾಟನೆ ಮಾಡಿ ತದನಂತರ ಈ ಒಂದು ಕಾರ್ಯಕ್ರಮವನ್ನು ಚಾಲನೆ ನೀಡಲಾಯಿತು. ಸೇವಾಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ ವಿಕ್ಟರ್ ವಾಸ್ ರವರು ಈ ಕಾರ್ಯಕ್ರಮದ ಪ್ರಸ್ತಾವಿಕ ನುಡಿಯನ್ನು ತಿಳಿಸಿದರು. ಸೇವಾಸಂಗಮ ಮಕ್ಕಳ ಮನೆ ಕಾರ್ಯಕ್ರಮವನ್ನು ಸ್ಥಾಪಿಸಲಾಯಿತು. ಏಳು ತಿಂಗಳಿಂದ ಮೂರು ವರ್ಷದ ಒಳಗಿನ ಎಲ್ಲಾ ಮಕ್ಕಳಿಗೆ ಈ ಮಕ್ಕಳ ಮನೆಗೆ ಅವಕಾಶ ಇರುವುದು ಮಕ್ಕಳ ಮನೆಯ ಉದ್ದೇಶಗಳು ಪ್ರತಿಯೊಂದು ಗ್ರಾಮದಲ್ಲಿ ಪ್ರವೇಶವನ್ನು ಸಕ್ರಿಯಗೊಳಿಸುವುದು ಮತ್ತು ಪೂರಕ ಆಹಾರ ಬಾಲ್ಯದ ಅಭಿವೃದ್ಧಿ ಮತ್ತು ಸರ್ಕಾರದ ಯೋಜನೆಗಳಿಗೆ ಪ್ರವೇಶವನ್ನು ಸುಗಮಗೊಳಿಸುವುದು ಹಾಗೂ ಬೆಳವಣಿಗೆ ಕುಂಠಿತ ಕಡಿಮೆ ತೂಕ ಮತ್ತು ಕ್ಷಣಿಸಿದ ಮಕ್ಕಳನ್ನು 7 ತಿಂಗಳು 3 ವರ್ಷದ ವಯಸ್ಸಿನ ಗುರುತಿಸುವುದು ಅವರನ್ನು ಆರೋಗ್ಯ ಸೌಲಭ್ಯಗಳಿಗಾಗಿ ನೋಂದಾಯಿಸುವುದು ಹಾಗೂ ಅನುಸರಣೆ ಮಾಡುವುದು ಕುರಿತು ಮಾಹಿತಿಯನ್ನು ನೀಡಿದರು. ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಾದ ಶ್ರೀಯುತ ನಂದಕುಮಾರ್ ದೊರೆ ಅವರು ಈ ಮಕ್ಕಳ ಮನೆ ಎರಡನೆಯದಾಗಿ ಇಲ್ಲಿ ಉದ್ಘಾಟನೆಯನ್ನು ಮಾಡಿರುವಂತ ಸೇವಾಸಂಗಮ ಸಂಸ್ಥೆಯವರಿಗೆ ಧನ್ಯವಾದ ತಿಳಿಸುತ್ತಾ ಮಕ್ಕಳಿಗೆ ಪ್ರತಿನಿತ್ಯ ಇಲ್ಲಿ ಕಳಿಸಿಕೊಡುವುದು ಮತ್ತು ನಾವು ನಮ್ಮ



ಮಕ್ಕಳಿಗೆ ನೋಡೋಕ್ಕಿಂತ ಹೆಚ್ಚು ಇಲ್ಲಿ ಅವರು ಕಾಳಜಿ ವಹಿಸುವರು ಬಗ್ಗೆ ಗ್ರಾಮಸ್ಥ ತಾಯಂದಿರಿಗೆ ತಿಳಿಸಿದರು. ಅಜೀಂ ಪ್ರೇಮ್‌ಜೀ ಫೌಂಡೇಶನ್, ಕರ್ನಾಟಕ ರಾಜ್ಯದ ಮಕ್ಕಳ ಮನೆ ಸಂಯೋಜಕರಾದ ಗುರುರಾಜ ರವರು ಮಕ್ಕಳ ಮನೆ ಘಟಕ ಎರಡನ್ನು ಇಂದು ನಾವು ಪ್ರಾರಂಭ ಮಾಡಿದ್ದೇವೆ ನೀವುಎಲ್ಲಾ ತಾಯಂದಿರು ಬಂದಿರುವಂಥದ್ದು ನಮಗೆ ತುಂಬಾ ಸಂತೋಷವಾಗಿರುವುದು ಪ್ರತಿದಿನ ತಾವು ಬೆಳಗೆ 9:30ರಿಂದ ಸಾಯಂಕಾಲ 5:00 ವರೆಗೆ ಮಕ್ಕಳ ಮನೆ ಚಾಲ್ತಿಯಲ್ಲಿರುವುದು ತಮ್ಮ ಮಕ್ಕಳಿಗೆ ಬಿಡುವುದು. ಏಳು ತಿಂಗಳಿಂದ ಮೂರು ವರ್ಷದ ಒಳಗಿನ ಎಲ್ಲ ಮಕ್ಕಳಿಗೆ ಇಲ್ಲಿ ಅವಕಾಶ ಇರುವುದು ಹಾಗೂ ಬೆಳಗಿನ ಉಪಹಾರ ಮಧ್ಯಾಹನ ದಾಲ್‌ಕಿಚಡಿ ಮತ್ತು ಒಂದು ಮೊಟ್ಟೆ ನೀಡುವದು ಹಾಗೂ ಸಾಯಂಕಾಲ ಅಲ್ಪ ಉಪಹಾರವನ್ನು ಒಂದು ದಿನ ಉಪ್ಪಿಟ್ಟು ಇನ್ನೋಂದು ದಿನ ಸಜಕ ನೀಡುವುದು, ಮಗುವನ್ನು ಸರಿಯಾಗಿ ಬೆಳವಣಿಗೆ ಆಗದೆ ಇರುವಂತ ಮಕ್ಕಳನ್ನು ಗುರುತಿಸಿ ಆ ಮಗುವಿಗೆ ಐದು ಬಾರಿ ಉಪಹಾರ ನೀಡುವುದು. ಹಾಗೂ ಮಕ್ಕಳು ಕೆಲವು ದಿನಗಳಲ್ಲಿ ಅಳುವುದು ತದನಂತರ ಎಲ್ಲ ಮಕ್ಕಳಿಗೆ ಇಲ್ಲಿ ಚಟುವಟಿಕೆ ಮಾಡಿಸುವುದು, ಲಾಲಿಹಾಡು ಹಾಡಿಸುವುದು ಈ ಮಕ್ಕಳ ಮನೆಯಲ್ಲಿ ಕೆಲವು ದಿನಗಳ ತಾವು ಇಲ್ಲಿ ಬಂದು ಭಾಗವಹಿಸಬಹುದು ಎಂದು ತಿಳಿಸಿದರು. 30 ಜನ ತಾಯಂದಿರು ಭಾಗವಹಿಸಿದರು.

# “ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಘಮ ಸಂಸ್ಥೆ ಕಾರ್ಯಕ್ರಮಗಳು”



ಹುಮನಾಬಾದ್‌ನ ಆರ್ಬಿಟ್ ಸಂಸ್ಥೆಯಲ್ಲಿ ಶನಿವಾರ ಸಂಜೆ ಕ್ರಿಸ್ಮಸ್ ಸೌಹಾರ್ದ ಕೂಟ ಆಯೋಜಿಸಲಾಗಿತ್ತು

## ಅನ್ಯರ ಸಂಕಷ್ಟದಲ್ಲಿ ಭಾಗಿಯಾಗಿ

ಸಂ.ಕ.ಸಮಾಚಾರ ಹುಮನಾಬಾದ್: ಕೇವಲ ತನಗಾಗಿ, ತನ್ನ ಪರಿವಾರ, ರಕ್ತಸಂಬಂಧಿಗಳಿಗಾಗಿ ಬದುಕುವುದು ದೊಡ್ಡದಲ್ಲ. ತನ್ನೊಂದಿಗೆ ಅನ್ಯರ ಸಂಕಷ್ಟದಲ್ಲಿ ಭಾಗಿಯಾಗುವವನೇ ನಿಜವಾದ ಮನುಷ್ಯ ಎಂದು ಹುಡಗಿ ವಿರಕ್ತ ಮಠದ ಪೂಜ್ಯ ಚನ್ನಮಲ್ಲಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದ ಆರ್ಬಿಟ್ ಸಂಸ್ಥೆಯಲ್ಲಿ ಶನಿವಾರ ಸಂಜೆ ನಡೆದ ಕ್ರಿಸ್ಮಸ್ ಸೌಹಾರ್ದ ಕೂಟದಲ್ಲಿ ಆಶೀರ್ವಚನ ನೀಡಿ, ಒಬ್ಬ ಸ್ನೇಹಿತ ನಿಜವಾದ ಗುಣ ಗೊತ್ತಾಗುವುದು ಆತ್ಮೀಯ ಸ್ನೇಹಿತನೊಬ್ಬ ಆರ್ಥಿಕ ಸಂಕಷ್ಟದಲ್ಲಿದ್ದಾಗ ಮತ್ತು ಅನಾರೋಗ್ಯದಿಂದ ನರಳುವಾಗ. ಈ ನಿಟ್ಟಿನಲ್ಲಿ ನಾವು ಇತರೆ ಪ್ರಾಣಿಗಳಂತೆ ಮನುಷ್ಯ ಪ್ರಾಣಿಗಳಾಗಿ ಬದುಕುವುದಕ್ಕಿಂತ ಮಾನವೀಯ ಮೌಲ್ಯಗಳಿಂದ ಕೂಡಿದ ಮನುಷ್ಯರಾಗಿ ಬಾಳಿ ಬದುಕಬೇಕೆಂದರು.

ಜಲಸಂಗವಿ ಆರೋಗ್ಯ ಮಾತೆ ದೇವಾಲಯದ ನಿರ್ದೇಶಕ ಫಾದರ್ ವಿನ್ಸೆಂಟ್ ತೋರಸ್ ಅಧ್ಯಕ್ಷತೆ ವಹಿಸಿ, ಮಾತನಾಡಿ, ಜಾತಿ ಧರ್ಮಗಳ ಎಲ್ಲೆ ಮೀರಿ, ಮಾನವೀಯ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಹೋಗುವ ಪ್ರತಿಯೊಬ್ಬರು ಪರಸ್ಪರ ಸೌಹಾರ್ದತೆಯಿಂದ ಬಾಳಿ ಬದುಕಬೇಕು ಎಂದರು. ಫಾದರ್ ವಿಕ್ಟರ್ ವಾಸ್ ಮಾತನಾಡಿದರು. ಆರ್ಬಿಟ್ ಸಂಸ್ಥೆಯ ಸೇವಾರ್ಥಿಗಳು ಏಸುಸ್ವಾಮಿ ಜನ್ಮ, ಪ್ರಪಂಚಕ್ಕೆ ಅವರು ನೀಡಿದ ಸಂದೇಶಗಳನ್ನು ಆಧರಿಸಿದ ಕಿರುನಾಟಕ ಪ್ರದರ್ಶಿಸಿ, ನೆರೆದ ಪ್ರೇಕ್ಷಕರ ಮನಸೂರೆಗೊಂಡರು.

ವಿಕಲಚೇತನ ಜಿಲ್ಲಾಧಿಕಾರಿ ಸುಭಾಷ ರತನ್, ಅಂಗನವಾಡಿ ಮೇಲ್ವಿಚಾರಕಿ ಮಲ್ಲಮ್ಮ, ಆಶಾ ಕಾರ್ಯಕರ್ತೆ ಲಕ್ಷ್ಮಿ, ಶಾಂತಿ ನಿಲಯ ಕಾನ್ವೆಂಟ್ ಮುಖ್ಯಸ್ಥೆ ಸಿಸ್ಟರ್ ಲೀರಾ ಮರಿಯಾ ಸೇರಿದಂತೆ ಆರ್ಬಿಟ್ ಸಂಸ್ಥೆಯ ವಿವಿಧ ವಿಭಾಗಗಳ ಸೇವಾರ್ಥಿಗಳು ಹಾಜರಿದ್ದರು.

## ನ್ಯೂನ್ಯತೆಗೆ ಒಳಗಾದ ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಣೆ



[illegible]

ಮಲ್ಲಮ್ಮ ನುಡಿ
12 Dec 2025 - Page 2

## ವಿಕಲಚೇತನರ ದಿನಾಚರಣೆ ಹಾಗೂ ಕ್ರಿಸ್ಮಸ್ ಹಬ್ಬ ಪ್ರಯುಕ್ತ ಮಕ್ಕಳಿಗೆ ಪೌಷ್ಟಿಕ ಆಹಾರ ವಿತರಣೆ



ಮಲ್ಲಮ್ಮ ನುಡಿ ವಾರ್ತೆ ಬೀದರ್:

[illegible]

## ಮಾನವೀಯ ಧರ್ಮ ಶ್ರೇಷ್ಠವಾದದ್ದು

• ದಿ ಡೈಲಿ ನ್ಯೂಸ್ ಹುಮನಾಬಾದ

ಎಲ್ಲ ಧರ್ಮಕಿಂತ ಮಾನವೀಯ ಧರ್ಮ ಶ್ರೇಷ್ಠವಾದದ್ದು ಎಂದು ಹುಡಗಿ ವಿರಕ್ತಮಠದ ಚೆನ್ನಮಲ್ಲ ಸ್ವಾಮೀಜಿಗಳು ಹೇಳಿದರು.

ಪಟ್ಟಣದ ಹೊರವಲಯದಲ್ಲಿರುವ ಆರ್ಬಿಟ್ ಸಂಸ್ಥೆಯಲ್ಲಿ ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಹಮ್ಮಿಕೊಂಡಿದ್ದ ಸರ್ವಧರ್ಮ ಸೌಹಾರ್ದಕೂಟ ಕಾರ್ಯಕ್ರಮದಲ್ಲಿ ಕೇಕ್ ಕತ್ತರಿಸುವ ಅವರು ಮಾತನಾಡಿದರು.

ಸರ್ವ ಧರ್ಮಗಳಲ್ಲಿಯೇ ಮಾನವೀಯತೆಯ ಧರ್ಮ ಶ್ರೇಷ್ಠವಾದದ್ದು, ಆರ್ಬಿಟ್ ಸಂಸ್ಥೆ ಹಲವಾರು ವರ್ಷಗಳಿಂದ, ಜಾತಿ ಧರ್ಮ ಕುಲ ಭೇದವಿಲ್ಲದೆ ಜಾತ್ಯತೀತ ಮನೋಭಾವನೆಯಿಂದ ಸರ್ವ ಜನಾಂಗ ಸುಖಿನೋ ಭವಂತು ಎನ್ನುವ ತತ್ವವನ್ನು ಅಳವಡಿಸಿಕೊಂಡು ತನ್ನ ಸೇವೆಯನ್ನು ಸಮಾಜದ ಅಂಚಿನಲ್ಲಿರುವ ಜನರಿಗೆ ಸುಮಾರು 30 ವರ್ಷದಿಂದ ತಲುಪಿಸುತ್ತಿರುವುದು ಶ್ಲಾಘನೀಯ ಎಂದು ಹೇಳುದರು.

ಜಿಲ್ಲಾ ವಿಶೇಷ ಚೇತನರ ಅಧಿಕಾರಿ ಸುಭಾಸ್ ರತನ್ ಮಾತನಾಡಿ, ಆರ್ಬಿಟ್ ಸಂಸ್ಥೆ ಜಿಲ್ಲೆಯಾದ್ಯಂತ ತನ್ನ ಸೇವೆ ಹೆಸರುವಾಸಿಯಾಗಿದೆ. ಕ್ರಿಸ್ಮಸ್ ಹಬ್ಬದ ಪ್ರಯುಕ್ತ ಸರ್ವಧರ್ಮಗಳ ಗುರುಗಳನ್ನು ಕರೆದು ವೇದಿಕೆ ಹಂಚಿಕೊಳ್ಳಲು ಅವಕಾಶ ಮಾಡಿಕೊಟ್ಟ ಆರ್ಬಿಟ್ ಸಂಸ್ಥೆಯವರಿಗೆ ಧನ್ಯವಾದಗಳು ಸಲ್ಲಿಸುತ್ತೇನೆ ಎಂದು ಹೇಳಿದರು.



ಈ ಸಂದರ್ಭದಲ್ಲಿ ಆರ್ಬಿಟ್ ಸಂಸ್ಥೆಯ ನಿರ್ದೇಶಕ ಫಾದರ್ ವಿಕ್ಟರ್ ವಾಸ್, ಫಾದರ ಥೋರಸ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಅಧಿಕಾರಿ ಮಲ್ಲಮ್ಮ, ಬೆಥನಿ ಕಾನ್ವೆಂಟ್ ಶಾಲೆಯ ಮುಖ್ಯಸ್ಥೆ ಸಿಸ್ಟರ್ ಲೀರಾ, ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕ ಫಾದರ್ ಅಲ್ಬರ್ಟ್, ಸಿಸ್ಟರ್ ಪ್ರೀತಿ, ಸಿಸ್ಟರ್ ಕ್ರಿಸ್ಟಿನ, ಸಿಸ್ಟರ ಎಡ್ನ, ಪ್ರವೀಣ್, ಸವಿತಾ, ಯಹಾನ್ ಸೇರಿ ಇತರರು ಇದ್ದರು.



ಯಡ್ರಾಮಿ ತಾಲ್ಲೂಕಿನ ಇಜೇರಿ ಗ್ರಾಮದಲ್ಲಿ ಈಚೆಗೆ ಮಕ್ಕಳ ಮನೆಯೊಳ್ನು ಶಾಸಕ ಹಾಗೂ ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯಸಿಂಗ್ ಉದ್ಘಾಟಿಸಿದರು

## ಇಜೇರಿ: ಮಕ್ಕಳ ಮನೆ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಯಡ್ರಾಮಿ: 'ದುಡಿಯುವ ಪಾಲಕರ ಮಕ್ಕಳಿಗೆ ಸುರಕ್ಷಿತ ಹಾಗೂ ಪೋಷಕರ ವಾತಾವರಣ ಒದಗಿಸುವಲ್ಲಿ ಕ್ರೆಚ್ ಮನೆಗಳು ಪ್ರಮುಖ ಪಾತ್ರ ವಹಿಸುತ್ತವೆ' ಎಂದು ಶಾಸಕ ಹಾಗೂ ಕೆಕೆಆರ್‌ಡಿಬಿ ಅಧ್ಯಕ್ಷ ಡಾ.ಅಜಯಸಿಂಗ್ ಹೇಳಿದರು.

ತಾಲ್ಲೂಕಿನ ಇಜೇರಿ ಗ್ರಾಮದಲ್ಲಿ ಈಚೆಗೆ ಅಜೀಮ್ ಪ್ರೇಮ್‌ಜಿ ಫೌಂಡೇಶನ್ ವತಿಯಿಂದ ನಡೆದ ಕ್ರೆಚ್ (ಮಕ್ಕಳ ಮನೆ) ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಂತರ ಅಜೀಮ್ ಪ್ರೇಮ್‌ಜಿ ಫೌಂಡೇಶನ್ ರಾಜ್ಯ ಮುಖ್ಯಸ್ಥ ರುದ್ರೇಶ್ ಅಧ್ಯಕ್ಷತೆ ವಹಿಸಿ ಮಾತನಾಡಿ, ಮುಂದಿನ ದಿನಗಳಲ್ಲಿ ರಾಜ್ಯ, ರಾಷ್ಟ್ರಮಟ್ಟದಲ್ಲಿ 25,000 ಕ್ರೆಚ್ ಮನೆಗಳನ್ನು ಆರಂಭಿಸುವ ಯೋಜನೆ ಇರುವುದಾಗಿ ಮಾಹಿತಿ ನೀಡಿದರು.

ಸೇವಾ ಸಂಗಮ ಅಭಿವೃದ್ಧಿ ಸಂಸ್ಥೆಯ ಕಲಬುರಗಿ ನಿರ್ದೇಶಕ ಫಾದರ್ ವಿಕ್ಟರ್ ಮಾತನಾಡಿ, ಇಜೇರಿ ಹಾಗೂ ಯಡ್ರಾಮಿ ತಾಲ್ಲೂಕಿನಲ್ಲಿ ಕ್ರೆಚ್ ಮನೆ ಅಗತ್ಯತೆಗಳ ಕುರಿತು ಅವರು ವಿವರಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರುಕುಂ ಪಟೇಲ್ ಅವರು, ಕ್ರೆಚ್ ಯೋಜನೆ ಬಗ್ಗೆ ಸಕಾರಾತ್ಮಕ ಹಾಗೂ ಉತ್ತೇಜನಕಾರಿ ಮಾತುಗಳಾಡಿದರು.

ಗ್ರಾಮಸ್ಥರು, ಮುಖಂಡರು, ಸಂಸ್ಥೆಯ ಸಿಬ್ಬಂದಿ, ಪಾಲಕರು ಇದ್ದರು.

ಕನ್ನಡಪ್ರಭ

ಸಚ್ಚರ್ಯ | 7 ತಿಂಗಳಿಂದ 3 ವರ್ಷದೊಳಗಿನ ಮಕ್ಕಳ ಆರೈಕೆಗೆ ಮನೆ | ವಿನೂತನ ಯೋಜನೆ ಅನುಷ್ಠಾನಕ್ಕೆ ಮುಂದಾದ ಅಜೀಂ ಪ್ರೇಮ್‌ಜೀ ಫೌಂಡೇಷನ್

## ಹಳ್ಳಿ ಕೂಲಿ ಕಾರ್ಮಿಕರ ಮಕ್ಕಳ ಆರೈಕೆಗಾಗಿ ಮಕ್ಕಳ ಮನೆ



ಮಕ್ಕಳ ಮನೆಯಲ್ಲಿನ ಸವಲತ್ತು

### ಮುಂದಿನ 5 ವರ್ಷಗಳಲ್ಲಿ 10 ಸಾವಿರ ಮನೆ: ರುದ್ರೇಶ್

[illegible]

KALABURAGI Edition
Dec 28, 2025 Page No. 06
Powered by: erelego.com

## ಮಕ್ಕಳ ಮನೆ ಹಳ್ಳಿಗಳ ತಾಯಂದಿರಿಗೆ ವರದಾನ

ಇಜೇರಿಯಲ್ಲಿ ಕೆಕೆಆರ್‌ಡಿಬಿ ಡಾ.ಅಜಯ್ ಸಿಂಗ್ ಅವರಿಂದ ಮಕ್ಕಳ ಮನೆ ಉದ್ಘಾಟನೆ



ಮುಂದಿನ ವರ್ಷದ ಯೋಜನೆ

[illegible]

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

## TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುನರ್ವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೇವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.





**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್
ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು
ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

Name : Sevasangama Development Society
Account No : 16040100022902
IFSC Code : FDRL0001604
Bank : Federal Bank
Branch : Super Market Kalaburagi

Fr. Victor Anil Vas
Director, Seva Sangama & ORBIT

Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in